21 March 2026 Saturday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಜೀವನದಲ್ಲಿ ನಾವು ಎಷ್ಟು ಜ್ಞಾನವನ್ನು ಹೊಂದಿದ್ದೇವೆ ಎನ್ನುವದಕ್ಕಿಂತ, ಆ ಜ್ಞಾನವನ್ನು ನಮ್ಮ ಬದುಕಿನಲ್ಲಿ ಎಷ್ಟು ಅಳವಡಿಸಿಕೊಂಡಿದ್ದೇವೆ ಎನ್ನುವುದು ಮುಖ್ಯ!

-ಸ್ನೇಹಾ ಆನಂದ್



ವೈರಮುಡಿ ಉತ್ಸವ: ಮೂಲ ಸೌಕರ್ಯ ಒದಗಿಸಲು ಸೂಚನೆ — ಪುಟ ಸಂ. 2


ವಿಜೃಂಭಣೆಯಿಂದ ನಡೆದ ಶ್ರೀ ಚಿಕ್ಕದೇವಮ್ಮ ದೇವಿಯ ಜಾತ್ರೆ — ಪುಟ ಸಂ. 3


ರಾಷ್ಟ್ರೀಯ ಹೆದ್ದಾರಿ ಗುಣಮಟ್ಟದಿಂದಿರಲಿ: ಸುನೀಲ್ ಬೋಸ್ — ಪುಟ ಸಂ. 4


info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 126 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಕ್ರಿಕೆಟ್ ಟಿಕೆಟ್ ಪಡೆದವರಿಗೆ ಮೆಟ್ರೋ ಪ್ರಯಾಣ ಉಚಿತ

**ಬೆಂಗಳೂರು:** ಆರ್‌ಸಿಬಿ ಅಭಿಮಾನಿಗಳಿಗೆ ಮತ್ತೊಂದು ಗುಡ್‌ನ್ಯೂಸ್ ಸಿಕ್ಕಿದೆ. ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ



ಪಂದ್ಯಗಳ ಟಿಕೆಟ್ ಪಡೆದವರಿಗೆ ಉಚಿತ ಮೆಟ್ರೋ ಪ್ರಯಾಣದ ಸೌಲಭ್ಯ ಕಲ್ಪಿಸಲಾಗಿದೆ. ಈ ಸಂಬಂಧ ಆರ್‌ಸಿಬಿ ಸೋಷಿಯಲ್ ಮೀಡಿಯಾ ಖಾತೆಯಲ್ಲಿ ಅಧಿಕೃತ

ಪುಟ 2ಕ್ಕೆ

## ಹಣಕಾಸು ವಿಚಾರಕ್ಕೆ ಯುವಕನ ಕೊಲೆ

**ಹಾಸನ:** ಹಣಕಾಸು ವಿಚಾರಕ್ಕೆ ಯುವಕನನ್ನು ಬರ್ಬರವಾಗಿ ಹತ್ಯೆಗೈದ ಘಟನೆ ಅರಸೀಕೆರೆ ತಾಲೂಕಿನ ಚಿನ್ನೇನಹಳ್ಳಿ ಗ್ರಾಮದಲ್ಲಿ ನಡೆದಿದೆ. ಹತ್ಯೆಯಾದ ಯುವಕನನ್ನು ಕೆ.ಎಂ.ವರುಣ್



(22) ಎಂದು ಗುರುತಿಸಲಾಗಿದೆ. ಶ್ರೀ ಜೇನುಕಲ್ಲು ಸಿದ್ದೇಶ್ವರಸ್ವಾಮಿ ಬೆಟ್ಟದ ಹಿಂಭಾಗದಲ್ಲಿ ಯುವಕನನ್ನು ದುಷ್ಕರ್ಮಿಗಳು ಹತ್ಯೆಗೈದಿದ್ದಾರೆ. ವರುಣ್ ಶವದ ಒಂದು ಮೂಳೆಯೂ ಸಿಗದಂತೆ ಸುಟ್ಟು ಹಾಕಿದ್ದಾರೆ. ಮಾ.15ರಂದು ಗಂಡಸಿ ಪೊಲೀಸ್ ಠಾಣೆಯಲ್ಲಿ ಕಾಣೆಯಾದ ಬಗ್ಗೆ ಪ್ರಕರಣ ದಾಖಲಾಗಿತ್ತು. ಈ ಬಗ್ಗೆ ವರುಣ್ ಸ್ನೇಹಿತ ನೀಡಿದ ಸುಳಿವಿನ ಮೇಲೆ ತನಿಖೆ ನಡೆಸಿದಾಗ ಹತ್ಯೆ ಸುಳಿವು ಸಿಕ್ಕಿದೆ. ಆರೋಪಿಗಳ ಬಂಧನಕ್ಕೆ ಪೊಲೀಸರು ಬಲೆಬೀಸಿದ್ದಾರೆ.

# 'ಲಾಕಪ್ ಡೆತ್': ಶವವಿಟ್ಟು ಪ್ರತಿಭಟನೆ

## ಪೊಲೀಸ್ ವಶದಲ್ಲಿದ್ದ ವ್ಯಕ್ತಿ ಅನುಮಾನಾಸ್ಪದ ಸಾವು । ಹುಳಿಯಾರಿನಲ್ಲಿ ಘಟನೆ

**ತುಮಕೂರು:** ಪೊಲೀಸ್ ವಶದಲ್ಲಿದ್ದ ವ್ಯಕ್ತಿ ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ಹುಳಿಯಾರು ಪೊಲೀಸ್ ಠಾಣೆಯಲ್ಲಿ ನಡೆದಿದೆ. ಮೃತರನ್ನು ಯಳನಾಡು ಗ್ರಾಮದ ದೇವಸ್ಥಾನದ ಗುಡಿಗೌಡ ಕಾಂತರಾಜು (50) ಎಂದು ಗುರುತಿಸಲಾಗಿದೆ.



ಮೃತರ ಸಾವಿಗೆ ಪೊಲೀಸರ ದೌರ್ಜನ್ಯವೇ ಕಾರಣ ಎಂದು ಆರೋಪಿಸಿ ಮೃತರ ಸಂಬಂಧಿಕರು ಹಾಗೂ ಗ್ರಾಮಸ್ಥರು ಠಾಣೆಯ ಮುಂದೆ ಶವವಿಟ್ಟು ಭಾರಿ ಪ್ರತಿಭಟನೆ ನಡೆಸಿದರು. ಇದರಿಂದ ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

ಇಸ್ಪೀಟ್ ಆಡುತ್ತಿದ್ದ ಸಂದರ್ಭದಲ್ಲಿ 6 ಜನರನ್ನ ಪೊಲೀಸರು ಠಾಣೆಗೆ ಕರೆದುಕೊಂಡು ಬಂದಿದ್ದರು. ಈ ವೇಳೆ ಠಾಣೆಯಲ್ಲಿ ಕಾಂತರಾಜು ಸಾವನ್ನಪ್ಪಿದ್ದರು. ಇದರಿಂದ ರೊಚ್ಚಿಗೆದ್ದ ಗ್ರಾಮಸ್ಥರು ಹುಳಿಯಾರು ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ, ಠಾಣೆಗೆ ಬೀಗ ಜಡಿದು ಪ್ರತಿಭಟಿಸಿದರು. ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ.



ಯಳನಾಡು ಗ್ರಾಮದ ದೇವಸ್ಥಾನದ ಹಿಂಭಾಗ ಗುರುವಾರ ಸಂಜೆ ಸುಮಾರು 5:30ರ ಸಮಯದಲ್ಲಿ ಕಾಂತರಾಜು ಸೇರಿದಂತೆ ಸುಮಾರು 10–15 ಜನರು ಇಸ್ಪೀಟ್ ಆಡುತ್ತಿದ್ದರು ಎನ್ನಲಾಗಿದೆ. ಈ ವೇಳೆ ದಾಳಿ ನಡೆಸಿದ ಪೊಲೀಸರು ಕಾಂತರಾಜು ಸೇರಿದಂತೆ ಆರು ಜನರನ್ನು ವಶಕ್ಕೆ ಪಡೆದು ಠಾಣೆಗೆ ಕರೆದೊಯ್ದಿದ್ದರು. ರಾತ್ರಿ 8 ಗಂಟೆಯಾದರೂ ವಶಕ್ಕೆ ಪಡೆದವರನ್ನು ಪೊಲೀಸರು ಬಿಡುಗಡೆ ಮಾಡಿರಲಿಲ್ಲ. ಈ ಬಗ್ಗೆ ವಿಚಾರಿಸಲು ಹೋದ ಗ್ರಾಮಸ್ಥರಿಗೆ ಮತ್ತು ಕುಟುಂಬಸ್ಥರಿಗೆ ಪೊಲೀಸರು ಠಾಣೆಯೊಳಗೆ ಪ್ರವೇಶ ನೀಡದೆ ವಾಪಸ್ ಕಳುಹಿಸಿದ್ದರು ಎಂಬುದು ಗ್ರಾಮಸ್ಥರ ಆಕ್ಷೇಪವಾಗಿದೆ.

ಠಾಣೆಯಲ್ಲಿ ವಿಚಾರಣೆ ಮುಗಿಸಿ ಹೊರಬರುತ್ತಿದ್ದಂತೆಯೇ ಕಾಂತರಾಜು ಅವರು ಠಾಣೆಯ ಆವರಣದಲ್ಲೇ ತೀವ್ರ ಅಸ್ವಸ್ಥಗೊಂಡು ಕುಸಿದು ಬಿದ್ದಿದ್ದಾರೆ ಎನ್ನಲಾಗಿದೆ. ತಕ್ಷಣ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಅಷ್ಟರಲ್ಲೇ ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದರು. ಠಾಣೆಯಲ್ಲಿದ್ದ ಇತರ ಪ್ರತ್ಯಕ್ಷದರ್ಶಿಗಳ ಪ್ರಕಾರ, ಪೊಲೀಸರು ಕಾಂತರಾಜು ಅವರಿಗೆ ತೀವ್ರವಾಗಿ ಲಾಠಿ ಪ್ರಹಾರ ನಡೆಸಿದ್ದಾರೆ. ಕಾಂತರಾಜು ಅವರು ತಮಗೆ ಸುಸ್ತಾಗುತ್ತಿದೆ ಎಂದು ಕೇಳಿಕೊಂಡರೂ ಪೊಲೀಸರು ನಿರ್ಲಕ್ಷಿಸಿ, ನಾಟಕ ಆಡಬೇಡ ಎಂದು ನಿಂದಿಸಿ ಹಲ್ಲೆ ಮುಂದುವರಿಸಿದ್ದರು ಎಂದು ಜೊತೆಯಲ್ಲಿದ್ದವರು ಆರೋಪಿಸಿದರು. ಈ ಸಮಯದಲ್ಲಿ ಠಾಣೆಯಲ್ಲಿ ವಿದ್ಯುತ್ ಸಂಪರ್ಕವೂ ಇರಲಿಲ್ಲ ಎನ್ನಲಾಗಿದೆ.

ಸಿಒಡಿ ತನಿಖೆಗೆ ಒತ್ತಾಯ: ಕೇವಲ ಇಸ್ಪೀಟ್ ಆಟದ ವಿಚಾರಕ್ಕೆ ಪೊಲೀಸರು ಪ್ರಾಣ ತೆಗೆಯುವ ಮಟ್ಟಿಗೆ ಹಲ್ಲೆ ಮಾಡಿರುವುದು ಅಮಾನವೀಯ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು. ಪೊಲೀಸರ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ತಾಳಲಾರದೆ ಅವರು ಸಾವನ್ನಪ್ಪಿದ್ದಾರೆ ಎಂದು ಠಾಣೆ ಬಳಿ ಶವವಿಟ್ಟು ಪ್ರತಿಭಟನೆ ನಡೆಸಿದರು.


ಮೃತರ ಕುಟುಂಬಕ್ಕೆ ಪರಿಹಾರ ನೀಡಬೇಕು. ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದ ಪೊಲೀಸರನ್ನು ಅಮಾನತು ಮಾಡಬೇಕು. ಪ್ರಕರಣದ ಸಮಗ್ರ ತನಿಖೆಯನ್ನು

ಪುಟ 2ಕ್ಕೆ

## ಸಿಐಡಿ ತನಿಖೆಗೆ ಆದೇಶ: ಗೃಹ ಸಚಿವ ಪರಮೇಶ್ವರ್

**ಬೆಂಗಳೂರು:** ತುಮಕೂರಿನಲ್ಲಿ ನಡೆದಿರುವ ಲಾಕಪ್ ಡೆತ್ ಪ್ರಕರಣವನ್ನ ಸಿಐಡಿ ತನಿಖೆಗೆ ಆದೇಶಿಸಲಾಗಿದೆ ಎಂದು ಗೃಹ ಸಚಿವ ಪರಮೇಶ್ವರ್ ತಿಳಿಸಿದರು.

ಬೆಂಗಳೂರಲ್ಲಿ ಮಾಧ್ಯಮಗಳ ಜೊತೆ ಶುಕ್ರವಾರ ಮಾತನಾಡಿದ ಅವರು, ನಿನ್ನೆ ವಿಚಾರಣೆ ಮಾಡುವಾಗಲೇ ಸಾವಾಗಿದೆ. ಯಾವ ಕಾರಣದಿಂದ ಸಾವಾಗಿದೆ ಎಂಬ ಮಾಹಿತಿ ಇಲ್ಲ. ಅದಕ್ಕಾಗಿ ಸಿಐಡಿ ತನಿಖೆಗೆ ಆದೇಶ ಮಾಡಿದ್ದೇನೆ ಎಂದು ತಿಳಿಸಿದರು.



ಹಲ್ಲೆ ಮಾಡಿದ್ದಕ್ಕೆ ಸಾವಾಗಿದೆ ಎಂಬ ಕುಟುಬಂಸ್ಥರ ಆರೋಪ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಪೊಲೀಸರು ಹೊಡೆದಿದ್ದರೆ ಸಿಐಡಿ ತನಿಖೆಯಲ್ಲಿ ಗೊತ್ತಾಗಲಿದೆ. ಮರಣೋತ್ತರ ಪರೀಕ್ಷೆಯಲ್ಲಿ ಕೂಡ ಗೊತ್ತಾಗುತ್ತದೆ. ಎಲ್ಲ ಘಟನೆಗಳ ಬಗ್ಗೆ ತನಿಖೆ ಮಾಡಿ ಸಿಐಡಿ ವರದಿ ಕೊಡುತ್ತದೆ. ಹಲ್ಲೆ ಆಗಿದ್ದರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದರು.

ಇದೇ ವೇಳೆ

ಪುಟ 2ಕ್ಕೆ

# ದಾವಣಗೆರೆ: ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ನಾಮಪತ್ರ ಸಲ್ಲಿಕೆ



**ದಾವಣಗೆರೆ:** ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಬಿಜೆಪಿ ಅಭ್ಯರ್ಥಿ ಟಿ.ಶ್ರೀನಿವಾಸ ದಾಸಕರಿಯಪ್ಪ ಶುಕ್ರವಾರ ಉಮೇದುವಾರಿಕೆ ಸಲ್ಲಿಸಿದರು. ಬಿಜೆಪಿ ನಾಯಕರ ಜೊತೆಗೆ ಚುನಾವಣಾ ಕಚೇರಿಗೆ ಆಗಮಿಸಿದ ಅವರು, ಪಕ್ಷದ ಬಿ ಫಾರಂ ಇಲ್ಲದೇ ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು.

ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯ ಘಟಕದ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ ಅವರಿಗೆ ಬಿಜೆಪಿ

ಪುಟ 2ಕ್ಕೆ

## ಇಂದು ರಂಜಾನ್ ಆಚರಣೆ

**ಬೆಂಗಳೂರು:** ಕರಾವಳಿ ಜಿಲ್ಲೆಗಳನ್ನು ಹೊರತುಪಡಿಸಿ ರಾಜ್ಯದಾದ್ಯಂತ ಈದ್ ಉಲ್ ಫಿತ್ರ್ (ರಂಜಾನ್) ಹಬ್ಬವನ್ನು ಮಾರ್ಚ್ 21ರಂದು ಆಚರಿಸಲು ರಾಜ್ಯ ಚಂದ್ರ ದರ್ಶನ ಸಮಿತಿ ನಿರ್ಧರಿಸಿದೆ. ಕನ್ನಿಂಗ್ ಹ್ಯಾಮ್ ರಸ್ತೆಯ ಔಕಾಫ್ ಕಚೇರಿಯಲ್ಲಿ ಈ ತೀರ್ಮಾನ ಕೈ ಗೊಳ್ಳಲಾಗಿದೆ. ಮಾರ್ಚ್ 21ರಂದು ರಂಜಾನ್ ಆಚರಿಸಲು ಸರ್ವಾನುಮತದಿಂದ ಘೋಷಿ ಸಿರುವುದಾಗಿ ಪ್ರಕಟಿಸಲಾಗಿದೆ.

## ಎಲ್‌ಪಿಜಿ ಉತ್ಪಾದನೆ ಶೇ.40ರಷ್ಟು ಹೆಚ್ಚಳ

**ನವದೆಹಲಿ:** ದೇಶೀಯ ಪೂರೈಕೆಯನ್ನು ಹೆಚ್ಚಿಸಲು ಮತ್ತು ವಿತರಣೆ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಎಲ್‌ಪಿಜಿ ಉತ್ಪಾದನೆ ಶೇ.40ರಷ್ಟು ಹೆಚ್ಚಾಗಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ದೇಶಾದ್ಯಂತದ ಇರುವ ಸಂಸ್ಕರಣಾಗಾರಗಳು

ಪುಟ 2ಕ್ಕೆ

# ಸಮರ್ಥ್ ಶಾಮನೂರು ನಾಮಪತ್ರ

## ಕಾಂಗ್ರೆಸ್ ಟಿಕೆಟ್ ಸಿಗದಿದ್ದರೆ ಬಂಡಾಯದ ಮನ್ಸೂಚನೆ?

**ದಾವಣಗೆರೆ:** ಕಾಂಗ್ರೆಸ್ ಟಿಕೆಟ್ ಅಕಾಂಕ್ಷಿ ಸಮರ್ಥ್ ಶಾಮನೂರು ಶುಕ್ರವಾರ ನಾಮಪತ್ರ ಸಲ್ಲಿಸಿದರು. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಟಿಕೆಟ್ ಹಂಚಿಕೆ ಇನ್ನೂ ಆಗದೇ ಇದ್ದರೂ ಸಮರ್ಥ್ ನಾಮಪತ್ರ ಸಲ್ಲಿಕೆ ಮಾಡಿ ಕುತೂಹಲ ಮೂಡಿಸಿದ್ದಾರೆ. ಸಮರ್ಥ್ ತಾಯಿ, ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಜೊತೆಗಿದ್ದರು.

ಈ ಬಾರಿ ನನಗೆ ಟಿಕೆಟ್ ಸಿಗುವ ಭರವಸೆ ಇದೆ. ತಾತನ ಕಾರಿನಲ್ಲೇ ಬಂದು ನಾಮಪತ್ರ ಸಲ್ಲಿಕೆ ಮಾಡಿದ್ದೇನೆ. ಅವರ ಸ್ಥಾನವನ್ನು ತುಂಬುವ ಕೆಲಸವನ್ನು ಮಾಡುತ್ತೇವೆ. ಅವರ ಕೊಠಡಿಯಲ್ಲಿ ಕುಳಿತು ನಾಮಪತ್ರಕ್ಕೆ ಸಹಿ ಹಾಕಿದ್ದೇನೆ ಎಂದು ತಿಳಿಸಿದರು.

ಜನರು ನಮ್ಮ ಮನೆಗೆ ಬಂದ ತಕ್ಷಣ ಶಾಮನೂರು ಅಜ್ಜ ಇದ್ದ ಕೊಠಡಿಗೆ ಹೋಗುತ್ತಿದ್ದರು. ಆದರೆ ಈಗ ಅದು ಖಾಲಿ ಖಾಲಿಯಾಗಿದೆ. ನನಗೆ ಸಾಕಷ್ಟು ಚುನಾವಣೆ ಮಾಡಿರುವ ಅನುಭವ ಇದೆ. ಸಾಕಷ್ಟು ಕಾರ್ಯಕರ್ತರ ಜೊತೆ ಒಡನಾಟವಿದೆ. ಕ್ಷೇತ್ರದ ಜನರು ಅಜ್ಜನನ್ನು ಆಯ್ಕೆ ಮಾಡಿದಂತೆ ನನಗೂ ಆಶೀರ್ವಾದ ಮಾಡಲಿದ್ದಾರೆ ಎಂಬ ವಿಶ್ವಾಸವಿದೆ ಎಂದರು.



ಪ್ರಭಾ ಮಲ್ಲಿಕಾರ್ಜುನ್ ಪ್ರತಿಕ್ರಿಯಿಸಿ, ಸಮರ್ಥ್ ಸಾಕಷ್ಟು ಉತ್ಸಾಹ ಹೊಂದಿದ್ದಾನೆ. ಈಗಾಗಲೇ ಟಿಕೆಟ್ ನೀಡುವಂತೆ ಹೈಕಮಾಂಡ್‌ಗೆ ಮನವಿ ಮಾಡಿದ್ದೇವೆ. ಕ್ಷೇತ್ರದಲ್ಲಿ ತಾತನ ಜೊತೆ ಸಾಕಷ್ಟು ಚುನಾವಣೆ ಮಾಡಿ ಅನುಭವ ಇರುವ ಕಾರಣ ಈ ಬಾರಿ ಸಮರ್ಥ್ ಟಿಕೆಟ್ ಸಿಗುವ ಭರವಸೆ ಇದೆ. ಇಂದು ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಜೊತೆ ಸಭೆ ಇರುವ ಕಾರಣ ಸಚಿವ ಮಲ್ಲಿಕಾರ್ಜುನ್ ಹೋಗಿದ್ದಾರೆ. ಯಾರಿಗೆ ಟಿಕೆಟ್ ಸಿಗಲಿದೆ

ಪುಟ 2ಕ್ಕೆ


## ಬಸ್ ಡಿಕ್ಕಿ: ಇಬ್ಬರು ಬೈಕ್ ಸವಾರರ ಸಾವು

**ಶಿರಾ:** ತಾಲ್ಲೂಕಿನ ಬರಗೂರು ಸಮೀಪದ ಬರಗೂರು–ದಾಸರಹಳ್ಳಿ ರಸ್ತೆಯಲ್ಲಿ ಶುಕ್ರವಾರ ಕೆಎಸ್ ಆರ್ ಟಿಸಿ ಬಸ್ ಮತ್ತು ಬೈಕ್ ಮಧ್ಯೆ ಅಪಘಾತದಲ್ಲಿ ಸಂಭವಿಸಿ ಇಬ್ಬರು ಮೃತಪಟ್ಟಿದ್ದಾರೆ. ಬೈಕ್ ಸವಾರರಾದ ಬರಗೂರು ಗ್ರಾಮದ ಮೂರ್ತಿ (25) ಮೃತರು. ಹಿಂಬದಿ ಸವಾರರ ವಿವರ ತಿಳಿದು ಬಂದಿಲ್ಲ. ಕೆಎಸ್‌ಆರ್‌ಟಿಸಿ ಬಸ್ ಮತ್ತು ಬೈಕ್ ಮುಖಾ ಮುಖಿಯಾಗಿ ಅವಘಡ ಸಂಭವಿಸಿದೆ. ಇಬ್ಬರು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಪಟ್ಟನಾಯ ಕನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.




## ಪ್ರೀಮಿಯಂ ಪೆಟ್ರೋಲ್ ಬೆಲೆ 2 ರೂ. ಹೆಚ್ಚಳ


**ನವದೆಹಲಿ:** ಇರಾನ್ ಯುದ್ಧದ ಬಿಸಿ ಪೆಟ್ರೋಲ್ ಗ್ರಾಹಕರಿಗೂ ತಟ್ಟಿದೆ. ತೈಲ ಕಂಪನಿಗಳು ಪ್ರೀಮಿಯಂ ಪೆಟ್ರೋಲ್ ದರವನ್ನು ಲೀಟರ್‌ಗೆ 2 ರೂ. ಏರಿಕೆ ಮಾಡಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ



ಕಚ್ಚಾ ತೈಲ ಬೆಲೆಗಳು ಭಾರೀ ಏರಿಕೆಯಾದ ಬೆನ್ನಲ್ಲೇ ಪ್ರತಿ ಲೀಟರ್ ಪ್ರೀಮಿಯಂ ಪೆಟ್ರೋಲ್‌ಗೆ 2 ರೂ. ದರ ಏರಿಕೆ ಮಾಡಲಾಗಿದೆ. ಪ್ರೀಮಿಯಂ ಪೆಟ್ರೋಲ್ ದರ ಮಾತ್ರ ಏರಿಕೆಯಾಗಿದ್ದು, ಸಾಮಾನ್ಯ ಪೆಟ್ರೋಲ್ ಬೆಲೆಯಲ್ಲಿ ಯಾವುದೇ ಬದಲಾವಣೆ ಯಾಗಿಲ್ಲ. ಪ್ರೀಮಿಯಂ ಪೆಟ್ರೋಲ್‌ನಲ್ಲಿ ಆಕ್ಟೇನ್ ರೇಟಿಂಗ್ ಜಾಸ್ತಿ ಇರುತ್ತದೆ. ಪೆಟ್ರೋಲ್ ಸಾಮಾನ್ಯವಾಗಿ 91ರ ಆಕ್ಟೇನ್ ರೇಟಿಂಗ್ ಅನ್ನು ಹೊಂದಿದ್ದರೆ ಪ್ರೀಮಿಯಂ ಅಥವಾ ಪವರ್ ಪೆಟ್ರೋಲ್‌ನ ಆಕ್ಟೇನ್ ರೇಟಿಂಗ್ ಸಾಮಾನ್ಯವಾಗಿ 93ರಿಂದ 97 ಇರುತ್ತದೆ.

# ನೀರಾನೆ ದಾಳಿ: ಯುವ ವೈದ್ಯೆ ಸಾವು

**ಶಿವಮೊಗ್ಗ:** ಇಲ್ಲಿನ ತ್ಯಾವರೆಕೊಪ್ಪ ಹುಲಿ ಮತ್ತು ಸಿಂಹಧಾಮದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪಶುವೈದ್ಯೆ ನೀರಾನೆ ದಾಳಿಯಿಂದ ಮೃತಪಟ್ಟಿದ್ದಾರೆ. ಬೆಂಗಳೂರು ಮೂಲದ ಡಾ. ಸಮೀಕ್ಷಾ ರೆಡ್ಡಿ (27) ಮೃತಪಟ್ಟ ವೈದ್ಯೆ ಎಂದು ಗುರುತಿಸಲಾಗಿದೆ.



ಸಮೀಕ್ಷಾ ಅವರು ಸಫಾರಿಯಲ್ಲಿ ಪಶುವೈದ್ಯ ಅಧಿಕಾರಿಯಾಗಿ ಆಯ್ಕೆಯಾಗಿ ತರಬೇತಿ ಪಡೆಯುತ್ತಿದ್ದರು. ಗುರುವಾರ ರಾತ್ರಿ 10:30ರ ಸುಮಾರಿಗೆ ಅವರು ಸನ್ ಕಾನರ್ ಹಕ್ಕಿಯ ಚಿಕಿತ್ಸೆಗಾಗಿ ಮೃಗಾಲಯದ ಆಸ್ಪತ್ರೆಗೆ ತೆರಳಿದ್ದರು. ಬಳಿಕ ರಾತ್ರಿ 11:45ರ ಸುಮಾರಿಗೆ ಗರ್ಭಿಣಿ ನೀರಾನೆ ದೇಹದ ಉಷ್ಣತೆಯನ್ನು ಥರ್ಮಲ್ ಕ್ಯಾಮೆರಾ ಮೂಲಕ ಪರೀಕ್ಷಿಸಲು ಆವರಣದ ಒಳಗೆ ಹೋಗಿದ್ದರು. ಈ ವೇಳೆ ನೀರಾನೆ ಹಠಾತ್ತಾಗಿ ಅವರ ಮೇಲೆ ದಾಳಿ ಮಾಡಿತ್ತು. ದಾಳಿಯಿಂದ ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ಬೆಳಿಗ್ಗೆ ಸಾವನ್ನಪ್ಪಿದರು.

ಈ ಘಟನೆ ದುರದೃಷ್ಟಕರ, ಪ್ರತಿ ಜೀವವೂ ಅಮೂಲ್ಯ. ಸರ್ಕಾರವು ಮೃತ ವೈದ್ಯರ ಕುಟುಂಬದ ಪರವಾಗಿ ನಿಲ್ಲಲಿದೆ. ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದೆ ಎಂದು ಅರಣ್ಯ

ಪುಟ 2ಕ್ಕೆ

## ಬಿಜೆಪಿ ಟಿಕೆಟ್ ಬದಲಾಗಬಹುದು!

### ಶಾಮನೂರು ಮೊಮ್ಮಗನಿಗೆ ಟಿಕೆಟ್ ಸಿಗಬಹುದು: ಯತ್ನಾಳ್

**ವಿಜಯಪುರ:** ದಾವಣಗೆರೆ ದಕ್ಷಿಣ ಕ್ಷೇತ್ರದ ಬಿಜೆಪಿ ಟಿಕೆಟ್ ಅನ್ನು ಸಿದ್ದೇಶ್ವರ ಆಪ್ತಗೆ ನೀಡಲಾಗಿದೆ. ಆದರೆ, ಇದು ಅಂತಿಮ ಅಲ್ಲ, ಕೊನೆ ಕ್ಷಣದಲ್ಲಿ ಅಭ್ಯರ್ಥಿ ಬದಲಾದರೂ ಆಶ್ಚರ್ಯ ಪಡಬೇಡಿ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೊಸ ಬಾಂಬ್ ಸಿಡಿಸಿದರು.



ನಾಮಪತ್ರ ಹಿಂಪಡೆಯುವ ಪ್ರಕ್ರಿಯೆ ಮುಗಿಯುವ ವರೆಗೂ ಇದನ್ನ ನಂಬುವ ಹಾಗಿಲ್ಲ. ಕಾಂಗ್ರೆಸ್ ಟಿಕೆಟ್ ಮುಸ್ಲಿಮರಿಗೆ ಕೊಟ್ಟರೆ ಇದು ಬದಲಾಗುತ್ತದೆ ಎಂದು ಯತ್ನಾಳ್ ತಿಳಿಸಿದರು.

ಈ ಹಿಂದೆ ಶಿವಮೊಗ್ಗದಲ್ಲಿ ರಾಘವೇಂದ್ರಗೆ ಮತ ಹಾಕುವಂತೆ ಶಾಮನೂರು ಶಿವಶಂಕರಪ್ಪ ಹೇಳಿದ್ದರು. ದಾವಣಗೆರೆಯಲ್ಲಿ ಶಾಮನೂರಿಗೆ ಮತ ಹಾಕಿ ಎಂದು ಯಡಿಯೂರಪ್ಪ ಹೇಳಿದ್ದರು. ಒಂದೊಮ್ಮೆ ದಾವಣಗೆರೆಯಲ್ಲಿ ಮುಸ್ಲಿಂ ಅಭ್ಯರ್ಥಿಗೆ ಕಾಂಗ್ರೆಸ್ ಟಿಕೆಟ್ ನೀಡಿದರೆ, ಹಾಲಿ ಬಿಜೆಪಿ ಅಭ್ಯರ್ಥಿಯಿಂದ ಟಿಕೆಟ್ ಹಿಂಪಡೆದು

ಪುಟ 2ಕ್ಕೆ

# ದೇವೇಗೌಡ, ಕುಮಾರಸ್ವಾಮಿಗೆ ವಿಶಾಲ ಹೃದಯವಿರಲಿಲ್ಲ: ಡಿಕೆಶಿ

**ನವದೆಹಲಿ:** ಜಾತ್ಯತೀತ ತತ್ವ ಉಳಿಸಬೇಕು ಎಂಬ ಕಾರಣಕ್ಕೆ ಕಾಂಗ್ರೆಸ್ ಪಕ್ಷ ಎಚ್.ಡಿ. ದೇವೇಗೌಡ ಅವರನ್ನು ಪ್ರಧಾನಿ ಮಾಡಿತ್ತು. ಅಲ್ಲದೆ, ಎಚ್.ಡಿ.ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದ್ದೆವು. ನಮ್ಮ ಪಕ್ಷ ಅವರಿಗೆ ಎಲ್ಲಾ ಅವಕಾಶಗಳನ್ನು ನೀಡಿದೆ. ಆದರೆ, ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುವ ವಿಶಾಲ ಹೃದಯ ಅವರಿಗೆ ಇರಲಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಟೀಕಿಸಿದರು.

ರಾಜ್ಯಸಭೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಕಾಂಗ್ರೆಸ್–ಜೆಡಿಎಸ್ ಸಂಬಂಧದ ಬಗ್ಗೆ ನೀಡಿದ ಹೇಳಿಕೆ ಬಗ್ಗೆ ಮಾತನಾಡಿದ ಅವರು, ಕೊಟ್ಟಂತಹ ಸ್ಥಾನವನ್ನು ನಿಭಾಯಿಸುವ ಸಾಮರ್ಥ್ಯ, ಧೈರ್ಯ ಎರಡನ್ನೂ ಅವರಿಬ್ಬರೂ ಹೊಂದಿರಲಿಲ್ಲ. ಮೈತ್ರಿಯನ್ನು ಸಾವಧಾನ, ಸಂತೋಷದಿಂದ ಮುನ್ನಡೆಸುವುದು ಅವರಿಗೆ ಕರ್ತವ್ಯವಾಗಿತ್ತು. ಜೊತೆಯಾಗಿ ಒಯ್ಯದ್ದಕ್ಕೆ ಅವರು ಅಧಿಕಾರ ಕಳೆದುಕೊಳ್ಳಬೇಕಾಯಿತು ಎಂದು ಲೇವಡಿ ಮಾಡಿದರು.

ದೇವೇಗೌಡರನ್ನು ಪ್ರಧಾನಿ ಮಾಡಿದ್ದು ಹಾಗೂ ಅವರ



ಮಗ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಿದ್ದು ಕಾಂಗ್ರೆಸ್ ಪಕ್ಷ. ನಮ್ಮ ಪಕ್ಷ ಅವರಿಗೆ ಎಲ್ಲಾ ಅವಕಾಶಗಳನ್ನು ನೀಡಿದೆ. ಅವರು ಕೊಟ್ಟಂತಹ ಸ್ಥಾನವನ್ನು ನಿಭಾಯಿಸುವ ಸಾಮರ್ಥ್ಯ ಮತ್ತು ಧೈರ್ಯ ಎರಡನ್ನೂ ಹೊಂದಿರಲಿಲ್ಲ ಎಂದು ಟೀಕಿಸಿದರು.

ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯ ಅಭ್ಯರ್ಥಿಗಳನ್ನು ಎರಡು–ಮೂರು ದಿನಗಳಲ್ಲಿ ಅಂತಿಮಗೊಳಿಸಲಾಗುವುದು ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಪುಟ 2ಕ್ಕೆ

## ಇಂಧನಕ್ಕೆ ಅಗತ್ಯ ಸರಕು ಕಾಯ್ದೆ ಜಾರಿ

### ಗ್ಯಾಸ್, ಪೆಟ್ರೋಲ್, ಡೀಸೆಲ್ ಅಕ್ರಮ ಸಂಗ್ರಹಕ್ಕೆ ಬ್ರೇಕ್

**ನವದೆಹಲಿ:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷ ಭಾರತದ ಮೇಲೂ ಪರಿಣಾಮ ಬೀರಿದೆ. ಕಚ್ಚಾತೈಲ, ಗ್ಯಾಸ್ ಸಮಸ್ಯೆ ಬಳಿಕ ಷೇರು ಮಾರುಕಟ್ಟೆಯಲ್ಲಿ ತಲ್ಲಣ ಸೃಷ್ಟಿಯಾಗಿದೆ. ರೂಪಾಯಿ ಮೌಲ್ಯ ಕುಸಿಯುತ್ತಿದೆ. ಈ ನಡುವೆ ಬ್ಲ್ಯಾಕ್ ಮಾರ್ಕೆಟ್ ಮೇಲೆ ನಿಗಾ ವಹಿಸಲು ಕೇಂದ್ರ ಸರ್ಕಾರ ಅಗತ್ಯ ಸರಕುಗಳ ಕಾಯ್ದೆಯ ಸೆಕ್ಷನ್ 3 ಜಾರಿ ಮಾಡಿದೆ.

ಭಾರತದಲ್ಲಿ ಪೆಟ್ರೋಲ್ ಡೀಸೆಲ್ ಸೇರಿದಂತೆ ಗ್ಯಾಸ್ ಸಮಸ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಈ ಹಿನ್ನೆಲೆ ಗ್ಯಾಸ್ ಅನ್ನು ಅಗತ್ಯ ಸರಕುಗಳ ಕಾಯ್ದೆಗೆ ಸೇರಿಸಿದ್ದ ಸರ್ಕಾರ ಈಗ, ಅಗತ್ಯ ಸರಕುಗಳ ಕಾಯ್ದೆಯ ಸೆಕ್ಷನ್ 3 ಅನ್ನು ಜಾರಿಗೊಳಿಸಿದೆ. ಸೆಕ್ಷನ್ 3ರ ಜಾರಿಯಿಂದ ಪೆಟ್ರೋಲಿಯಂ ಉತ್ಪನ್ನಗಳು ಮತ್ತು ನೈಸರ್ಗಿಕ ಅನಿಲದ ಉತ್ಪಾದನೆ, ಸಂಸ್ಕರಣೆ, ಸಂಸ್ಕರಣೆ, ಸಂಗ್ರಹಣೆ, ಆಮದು, ರಫ್ತು,

ಪುಟ 2ಕ್ಕೆ

# ವಾಣಿಜ್ಯ ಎಲ್‌ಪಿಜಿ ಪೂರೈಕೆ ಮಾಡಿ

## ಕೇಂದ್ರ ಇಂಧನ ಸಚಿವರಿಗೆ ಸಿಎಂ ಸಿದ್ದರಾಮಯ್ಯ ಆಗ್ರಹ

**ಬೆಂಗಳೂರು:** ರಾಜ್ಯದಲ್ಲಿ ಹೆಚ್ಚುತ್ತಿರುವ ಎಲ್‌ಪಿಜಿ ಕೊರತೆಯ ಬಿಕ್ಕಟ್ಟು ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ಅವರಿಗೆ ಪತ್ರ ಬರೆದಿದ್ದಾರೆ. ರಾಜ್ಯಕ್ಕೆ ಕೂಡಲೇ ಸಮರ್ಪಕವಾಗಿ ಎಲ್‌ಪಿಜಿ ಪೂರೈಕೆಗೆ ಸೂಕ್ತ ಕ್ರಮಕೈಗೊಳ್ಳುವಂತೆ ಅವರು ಆಗ್ರಹಿಸಿದ್ದಾರೆ.

ಗೃಹ ಬಳಕೆದಾರರಿಗೆ ಎಲ್‌ಪಿಜಿ ಪೂರೈಕೆಗೆ ಆದ್ಯತೆ ನೀಡುವ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಆದೇಶವನ್ನು ಉಲ್ಲೇಖಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ರಾಜ್ಯ ಸರ್ಕಾರ ಕೇಂದ್ರದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಿದೆ. ಅಗತ್ಯ ಕ್ಷೇತ್ರಗಳಿಗೆ ಹಂಚಿಕೆ ಮಾಡಲು ಮತ್ತು ಆದ್ಯತೆ ನೀಡಲು ಕ್ರಮಕೈಗೊಂಡಿದೆ. ಆದರೆ, ರೆಸ್ಟೋರೆಂಟ್, ಹೋಟೆಲ್‌ಗಳು, ಕ್ಯಾಟರಿಂಗ್ ಸಂಸ್ಥೆಗಳು ಮತ್ತು ಪಿಜಿ ಇತ್ಯಾದಿಗಳಿಂದ ದಿನಕ್ಕೆ 50,000 ಎಲ್‌ಪಿಜಿ ಸಿಲಿಂಡರ್‌ಗಳಿಗೆ ಬೇಡಿಕೆ ಇದೆ. ಆದರೆ ದಿನಕ್ಕೆ ಕೇವಲ 1,000 ಸಿಲಿಂಡರ್‌ಗಳನ್ನು ಮಾತ್ರ ಪೂರೈಸಲು ನಮ್ಮಿಂದ ಸಾಧ್ಯವಾಗುತ್ತಿದೆ. ಪರಿಣಾಮ ವಾಣಿಜ್ಯ ಎಲ್‌ಪಿಜಿ ಕೊರತೆಯಿಂದ ಅನೇಕ ಸಂಸ್ಥೆಗಳನ್ನು ಮುಚ್ಚುವ ಪರಿಸ್ಥಿತಿ ಎದುರಾಗಿದೆ ಎಂದು ಸಿಎಂ ತಿಳಿಸಿದ್ದಾರೆ.



ಇದು ವಿದ್ಯಾರ್ಥಿಗಳು, ಐಟಿ ವೃತ್ತಿಪರರು, ರೈತರು, ಡೈರಿ ಉತ್ಪಾದಕರು ಸೇರಿದಂತೆ ಆತಿಥ್ಯ ಕ್ಷೇತ್ರದ ಮೇಲೆ ಅವಲಂಬಿತವಾಗಿರುವ ಸಾರ್ವಜನಿಕರ ಮೇಲೆ ವ್ಯಾಪಕ ಪರಿಣಾಮ ಬೀರುತ್ತಿದೆ. ಗೃಹ ಬಳಕೆಯ ಅನಿಲ ಪೂರೈಕೆ ಮೇಲ್ವಿಚಾರಣೆ ಮಾಡಲು ಈಗಾಗಲೇ ಐಟಿ ವ್ಯವಸ್ಥೆ

ಪುಟ 2ಕ್ಕೆ

ಮೊದಲ ಪುಟದಿಂದ

## ವಾಣಿಜ್ಯ ಎಲ್‌ಪಿಜಿ ಪೂರೈಕೆ ಮಾಡಿ

ಇದ್ದರೂ ವಾಣಿಜ್ಯ ಪೂರೈಕೆಯನ್ನು ಮೇಲ್ವಿಚಾರಣೆ ಮಾಡಲು ಸಮಗ್ರ ವೇದಿಕೆಯಿಲ್ಲ. ನಗರದ ಕಟ್ಟಕಡೆಯ ಸಂಪರ್ಕ ವ್ಯವಸ್ಥೆಯ ಮುಖ್ಯ ಭಾಗವಾಗಿರುವ ಮತ್ತು ಅನೇಕ ಚಾಲಕರಿಗೆ ಜೀವನೋಪಾಯವಾಗಿರುವ ಆಟೊ ರಿಕ್ಷಾಗಳಿಗೆ ಎಲ್‌ಪಿಜಿ ಅಗತ್ಯವಾಗಿದೆ. ಆಟೋಗಳಿಗೆ ಎಲ್‌ಪಿಜಿ ವಿತರಣೆಯನ್ನು ಮೇಲ್ವಿಚಾರಣೆ ಮಾಡಲು ಯಾವುದೇ ಸಂಯೋಜಿತ ವ್ಯವಸ್ಥೆ ಇಲ್ಲದ ಕಾರಣ ಪಾರದರ್ಶಕತೆ ಮತ್ತು ಹೊಣೆಗಾರಿಕೆಯ ಕೊರತೆ ಉಂಟಾಗಿದೆ ಎಂದು ತಿಳಿಸಿದ್ದಾರೆ. ಭಾರತಕ್ಕೆ ಶೀಘ್ರದಲ್ಲಿಯೇ 2 ತೈಲ ಟ್ಯಾಂಕರ್‌ಗಳು ಬರಲಿವೆ ಎಂದು ತಿಳಿದು ಬಂದಿದೆ. ಇದರಿಂದ ಈ ಮೇಲಿನ ಸಮಸ್ಯೆಗಳನ್ನು ಬಹುಮಟ್ಟಿಗೆ ನಿವಾರಿಸಬಲ್ಲದು. ಆದ್ದರಿಂದ ರಾಜ್ಯದ ಕಾರ್ಯಾಚರಣೆ ಅಗತ್ಯತೆ ವಿಶೇಷವಾಗಿ ಬೆಂಗಳೂರು ನಗರದ ವಿಶಿಷ್ಟ ಅವಲಂಬನೆ ಮಾದರಿಗಳನ್ನು ಗಮನದಲ್ಲಿಟ್ಟುಕೊಂಡು, ಕರ್ನಾಟಕಕ್ಕೆ ವಾಣಿಜ್ಯ ಎಲ್‌ಪಿಜಿ ಮತ್ತು ಆಟೋಗಳಿಗೆ ಎಲ್‌ಪಿಜಿಯ ಸಮರ್ಪಕ ಹಂಚಿಕೆ ಮತ್ತು ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ನಿಮ್ಮ ಮಧ್ಯಸ್ಥಿಕೆಗಾಗಿ ವಿನಂತಿಸುತ್ತೇನೆ ಎಂದು ಸಿಎಂ ಪತ್ರದಲ್ಲಿ ತಿಳಿಸಿದ್ದಾರೆ.

## ಅಗತ್ಯ ಸರಕು ಕಾಯ್ದೆ ಜಾರಿ

ಮಾರುಕಟ್ಟೆ ಮತ್ತು ಬಳಕೆಯಲ್ಲಿ ತೊಡಗಿರುವ ಎಲ್ಲಾ ಕಂಪನಿಗಳು ಮಾಹಿತಿಯನ್ನು ಸರ್ಕಾರದ ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣಾ ಕೋಶದೊಂದಿಗೆ ನವೀಕೃತ ಡೇಟಾವನ್ನು ಹಂಚಿಕೊಳ್ಳುವುದು ಕಡ್ಡಾಯವಾಗಲಿದೆ. ಮಧ್ಯಪ್ರಾಚ್ಯ ಸಂಘರ್ಷದಿಂದ ದೇಶದ ಷೇರುಮಾರುಕಟ್ಟೆಯಲ್ಲಿ ದೊಡ್ಡ ಕುಸಿತ ಕಂಡುಬಂದಿದೆ. ಈ ಬೆನ್ನಲ್ಲೇ ಭಾರತದ ರೂಪಾಯಿ ಮೌಲ್ಯ ಕುಸಿದಿದೆ. ಶುಕ್ರವಾರ ರೂಪಾಯಿ ಮೌಲ್ಯ 19 ಪೈಸೆ ಕುಸಿತದೊಂದಿಗೆ 93.08ಕ್ಕೆ ತಲುಪಿದೆ.

## ಉತ್ಪಾದನೆ ಶೇ.40ರಷ್ಟು ಹೆಚ್ಚಳ

ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ತಮ್ಮ ಅತ್ಯುನ್ನತ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಇಲ್ಲಿಯವರೆಗೆ ಸುಮಾರು 11,300 ಟನ್ ಎಲ್‌ಪಿಜಿಯನ್ನು ಗ್ರಾಹಕರಿಗೆ ಪೂರೈಸಲಾಗಿದೆ. ಪ್ರಮುಖ 15 ಭೌಗೋಳಿಕ ಪ್ರದೇಶಗಳಲ್ಲಿ ಸುಮಾರು 13,700 ಪೈಪ್ಡ್ ನೈಸರ್ಗಿಕ ಅನಿಲ ಸಂಪರ್ಕಗಳನ್ನು ಒದಗಿಸಲಾಗಿದೆ. ಆನ್‌ಲೈನ್ ಎಲ್‌ಪಿಜಿ ಬುಕ್ಕಿಂಗ್ ಶೇ.93ಕ್ಕೆ ಏರಿಕೆಯಾಗಿದೆ ಎಂದು ಮಾಹಿತಿ ನೀಡಿದರು. ಸಿಲಿಂಡರ್‌ಗಳ ಅಕ್ರಮ ಮಾರಾಟ ತಡೆಯಲು ಮತ್ತು ನ್ಯಾಯಯುತ ವಿತರಣೆಯನ್ನು ಖಚಿತಪಡಿಸಿಕೊಳ್ಳಲು ಅಧಿಕಾರಿಗಳು ಗುರುವಾರ ಭಾರತದಾದ್ಯಂತ ಸುಮಾರು 4,500 ದಾಳಿಗಳನ್ನು ನಡೆಸಿದ್ದಾರೆ ಎಂದು ಹೇಳಿದರು.

## ಮೆಟ್ರೋ ಪ್ರಯಾಣ ಉಚಿತ

ಮಾಹಿತಿ ನೀಡಿದೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ದಲ್ಲಿ ಮಾರ್ಚ್ 28ರಂದು ಎಸ್‌ಆರ್‌ಹೆಚ್ ವಿರುದ್ಧ ಆರ್‌ಸಿಬಿ ಉದ್ಘಾಟನಾ ಪಂದ್ಯವನ್ನು ಆಡಲಿದೆ. ಏಪ್ರಿಲ್ 5ರಂದು ಸಿಎಸ್‌ಕೆ ವಿರುದ್ಧ ಇದೇ ಕ್ರೀಡಾಂಗಣದಲ್ಲಿ ಸೆಣಸಲಿದೆ. ತವರಿನಲ್ಲಿ ಎರಡು ಪಂದ್ಯಗಳನ್ನು ಆರ್‌ಸಿಬಿ ಆಡಲಿದೆ. ಪಂದ್ಯದ ಟಿಕೆಟ್ ತೋರಿಸುವ ಮೂಲಕ ಅಭಿಮಾನಿಗಳು ಸ್ಟೇಡಿಯಂಗೆ ಹೋಗಲು ಮತ್ತು ಬರಲು ಮೆಟ್ರೋ ಬಳಸಬಹುದು. ಸ್ಟೇಡಿಯಂ ಸುತ್ತಮುತ್ತ ಉಂಟಾಗುವ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವುದು ಮತ್ತು ಸಾರ್ವಜನಿಕ ಸಾರಿಗೆ ಬಳಕೆಯನ್ನು ಉತ್ತೇಜಿಸುವುದು ಮುಖ್ಯ ಗುರಿ ಎಂದು ತಿಳಿಸಿದೆ. ಬಿಎಂಆರ್‌ಸಿಎಲ್ ಜೊತೆಗೆ ಆರ್‌ಸಿಬಿ ಮ್ಯಾನೇಜ್‌ಮೆಂಟ್ ಚರ್ಚೆ ನಡೆಸಿತ್ತು. ಮಾತುಕತೆ ಫಲಪ್ರದವಾಗಿದ್ದು, ಪಂದ್ಯ ವೀಕ್ಷಿಸಲು ಸ್ಟೇಡಿಯಂಗೆ ಹೋಗುವವರಿಗೆ ಮೆಟ್ರೋ ಪ್ರಯಾಣ ಉಚಿತ ಇರಲಿದೆ.

## ಸಿಐಡಿ ತನಿಖೆಗೆ ಆದೇಶ

ಹುಬ್ಬಳ್ಳಿಯಲ್ಲಿ ರೀಲ್ಸ್ ಮಾಡಲು ಹೋಗಿ ಅಪ್ರಾಪ್ತರು ಸಾವಿಗೀಡಾದ ಬಗ್ಗೆ ಮಾತನಾಡಿ, ಯುವಕರು ವ್ಹೀಲಿಂಗ್ ಮಾಡುವುದು, ರೀಲ್ಸ್ ಮಾಡಲು ಹೋಗ್ತಾರೆ. ಏನೋ ಒಂದು ಖುಷಿಗೆ ಮಾಡ್ತಾರೆ. ಹಾಗೆ ಮಾಡಬಾರದು ಅಂತ ಬಹಳ ಕಂಟ್ರೋಲ್ ಮಾಡಿದ್ದೇವೆ. ಆದರೂ, ಪೊಲೀಸ್ ಕಣ್ತಪ್ಪಿಸಿ ಹೋಗಿ ಹೀಗೆ ಮಾಡಿಕೊಳ್ಳುತ್ತಾರೆಂದು ಬೇಸರ ವ್ಯಕ್ತಪಡಿಸಿದರು. ಬೆಂಗಳೂರಿನಲ್ಲಿ ವ್ಹೀಲಿಂಗ್ ಮಾಡೋದು ಮಾನಿಟರ್ ಮಾಡಿದ್ದೇವೆ. ಆದರೂ, ಬೆಳಗಿನ ಜಾವ ಹೋಗಿ ವ್ಹೀಲಿಂಗ್ ಮಾಡ್ತಾರೆ. ಇದನ್ನು ಮಾನಿಟರ್ ಮಾಡಲು ಪೊಲೀಸರಿಗೆ ಕಷ್ಟ ಆಗುತ್ತದೆ. ಇವರಿಗೆ ಎಜುಕೇಟ್ ಮಾಡಲು ಪೊಲೀಸ್ ಪ್ರಯತ್ನ ಮಾಡ್ತಾರೆ ಎಂದು ತಿಳಿಸಿದರು.

## ಶ್ರೀನಿವಾಸ್ ನಾಮಪತ್ರ ಸಲ್ಲಿಕೆ

ಸಂಸದೀಯ ಮಂಡಳಿ ಟಿಕೆಟ್ ಘೋಷಣೆ ಮಾಡಿತ್ತು. ಪ್ರಮುಖ ಆಕಾಂಕ್ಷಿಗಳಾಗಿದ್ದ ಬಿ.ಜಿ. ಅಜಯ್‌ಕುಮಾರ್ ಹಾಗೂ ಯಶವಂತರಾವ್ ಜಾಧವ್ ಜೊತೆಗೆ ಉಮೇದುವಾರಿಕೆ ಸಲ್ಲಿಸಿ ಒಗ್ಗಟ್ಟಿನ ಸಂದೇಶ ರವಾನಿಸಿದರು. ಶುಭದಿನ ಎಂಬ ಕಾರಣಕ್ಕೆ ಶುಕ್ರವಾರ ಸಾಂಕೇತಿಕವಾಗಿ ನಾಮಪತ್ರ ಸಲ್ಲಿಸಿದ್ದೇನೆ. ಸೋಮವಾರ ಅದ್ಧೂರಿ ಮೆರವಣಿಗೆ ಮೂಲಕ ನಾಮಪತ್ರ ಸಲ್ಲಿಕೆ ಮಾಡಲಾಗುವುದು. ರಾಜ್ಯದ ಪ್ರಮುಖ ನಾಯಕರು ಆಗಮಿಸದ್ದಾರೆ. ರಾಷ್ಟ್ರೀಯ ಮುಖಂಡರಿಗೂ ಆಹ್ವಾನ ನೀಡಿದ್ದೇವೆ. 25,000ಕ್ಕೂ ಹೆಚ್ಚು ಬಿಜೆಪಿ ಕಾರ್ಯಕರ್ತರು ಸೇರಲಿದ್ದಾರೆ ಎಂದು ಉಮೇದುವಾರಿಕೆ ಸಲ್ಲಿಸಿದ ಬಳಿಕ ಶ್ರೀನಿವಾಸ ತಿಳಿಸಿದರು.

ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪ್ರಮುಖ ಎದುರಾಳಿ. ಆ ಪಕ್ಷದಿಂದ ಯಾರೇ ಕಣಕ್ಕೆ ಇಳಿದರೂ ಎದುರಿಸಲು ಬಿಜೆಪಿ ತಯಾರಾಗಿದೆ. ಗೆಲುವಿಗೆ ಅಗತ್ಯವಿರುವ ತಂತ್ರಗಾರಿಕೆ, ಕಾರ್ಯತಂತ್ರವನ್ನು ಪಕ್ಷ ರೂಪಿಸಿದೆ. ಎಲ್ಲರೂ ಒಗ್ಗೂಡಿ ಚುನಾವಣೆ ಎದುರಿಸುತ್ತೇವೆ ಎಂದು ಹೇಳಿದರು.

## ಸಮರ್ಥ್ ಶಾಮನೂರು ನಾಮಪತ್ರ

ಎನ್ನುವುದು ಗೊತ್ತಾಗಲಿದೆ. ನಾಮಪತ್ರ ಸಲ್ಲಿಕೆ ಮಾಡಲು ಎಲ್ಲರಿಗೂ ಹಕ್ಕು ಇದೆ. ಅಲ್ಪಸಂಖ್ಯಾತರು ಕೂಡ ನಾಮಪತ್ರ ಸಲ್ಲಿಕೆ ಮಾಡಿದ್ದಾರೆ. ಯಾರಿಗೆ ಟಿಕೆಟ್ ಸಿಗುತ್ತದೆಯೋ ಅವರೇ ಅಂತಿಮ ಎಂದು ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

## ಯುವ ವೈದ್ಯೆ ಸಾವು

ಸಚಿವ ಈಶ್ವರ್ ಖಂಡ್ರೆ ತಿಳಿಸಿದರು. ದುರಂತದ ಕುರಿತು ಹಿರಿಯ ಪಶುವೈದ್ಯರು ಹಾಗೂ ಅರಣ್ಯಾಧಿಕಾರಿಗಳ ತಂಡ ಕೂಲಂಕುಷವಾಗಿ ತನಿಖೆ ನಡೆಸಲಿದೆ. ಘಟನೆ ಸಂಭವಿಸಲು ಕಾರಣಗಳೇನು? ಸುರಕ್ಷತಾ ಲೋಪಗಳಿವೆಯೇ ಎಂಬ ಬಗ್ಗೆ ಪರಾಮರ್ಶಿಸಿ 7 ದಿನಗಳಲ್ಲಿ ವರದಿ ಸಲ್ಲಿಸಬೇಕು ಎಂದು ಸೂಚಿಸಿದ್ದಾರೆ.

## ವಿಶಾಲ ಹೃದಯವಿರಲಿಲ್ಲ: ಡಿಕೆಶಿ

ದಾವಣಗೆರೆ ಟಿಕೆಟ್ ವಿಚಾರವಾಗಿ ಗೊಂದಲ ಉಂಟಾಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಹಾಗೂ ಸಿಎಂ ಈ ವಿಚಾರವಾಗಿ ಚರ್ಚೆ ಮಾಡಿದ್ದೇವೆ. ವರದಿ ಇನ್ನೂ ಬಂದಿಲ್ಲ. ಮುಖ್ಯಮಂತ್ರಿಗಳು ಎಚ್.ವೈ. ಮೇಟಿ ಅವರ ಕುಟುಂಬದವರನ್ನು ಕರೆಸಿ ಚರ್ಚೆ ಮಾಡಿದ್ದಾರೆ. ಈ ಬಗ್ಗೆ ನಾನು ಹೈಕಮಾಂಡ್ ನಾಯಕರಿಗೆ ವರದಿ ನೀಡುತ್ತೇನೆ. ಅಂತಿಮ ತೀರ್ಮಾನ ಹೈಕಮಾಂಡ್ ತೆಗೆದುಕೊಳ್ಳಲಿದೆ ಎಂದು ತಿಳಿಸಿದರು.

## ಬಿಜೆಪಿ ಟಿಕೆಟ್ ಬದಲಾಗಬಹುದು!

ಶಾಮನೂರು ಮಲ್ಲಿಕಾರ್ಜುನ್ ಪುತ್ರನಿಗೆ ನೀಡಿದರೂ ಆಶ್ಚರ್ಯವಿಲ್ಲ ಎಂದು ಯತ್ನಾಳ್ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಶಾಮನೂರು ಶಿವಶಂಕರಪ್ಪ ಅವರ ಕುಟುಂಬಕ್ಕೆ ಬಿಜೆಪಿ ಟಿಕೆಟ್ ಸಿಗುತ್ತದೆ. ಶಾಮನೂರು ಅವರ ಉಪಕಾರ ಪೂಜ್ಯ ತಂದೆ ಯಡ್ಡಿಯೂರಪ್ಪ, ಪುತ್ರರಾದ ರಾಘವೇಂದ್ರ, ವಿಜಯೇಂದ್ರ ಮೇಲೆ ತುಂಬಾ ಇದೆ. ರಾಘವೇಂದ್ರ ಹಾಗೂ ವಿಜಯೇಂದ್ರ ಗೆಲ್ಲಲು ಶಾಮನೂರು ಅವರ ಸಹಾಯ ಇದೆ. ಸಿದ್ದೇಶ್ವರ ಅಪ್ಪಗೆ ಟಿಕೆಟ್ ಕೊಟ್ಟರೂ ಪೂಜ್ಯ ತಂದೆ ಹಾಗೂ ಮಕ್ಕಳು ಬಿಜೆಪಿ ಅಭ್ಯರ್ಥಿಯನ್ನ ಸೋಲಿಸುತ್ತಾರೆ. ಶಾಮನೂರು ಅವರ ಉಪಕಾರ ತೀರಿಸಲು ಕೊನೆ ಕ್ಷಣದಲ್ಲಿ ಏನು ಬೇಕಾದರೂ ಮಾಡ್ತಾರೆ ಎಂದು ಯತ್ನಾಳ್ ಆರೋಪಿಸಿದರು.

# ನಾಳೆ ಯುಗಾದಿ ಕವಿಗೋಷ್ಠಿ




ಮಂಡ್ಯ: ಕೆಟಿಎಚ್ ಕನ್ನಡ ಬಳಗ ಹಾಗೂ ನಂಜಮ್ಮ ಮೋಟೆಗೌಡ ಚಾರಿಟಬಲ್ ಅಂಡ್ ಎಜುಕೇಶನಲ್ ಟ್ರಸ್ಟ್ ವತಿಯಿಂದ ಮಾ.22 ರಂದು ಸಂಜೆ 4.30ಕ್ಕೆ ನಗರದ ಗಾಂಧಿಭವ ನದಲ್ಲಿ ವಿಶ್ವಕವಿಗಳ ದಿನದ ನಿಮಿತ್ತ ಯುಗಾದಿ ಕವಿಗೋಷ್ಠಿ ಆಯೋಜಿಸಲಾಗಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಕೆ.ಟಿ.ಹನುಮಂತು ತಿಳಿಸಿದರು.

ಕಾರ್ಯಕ್ರಮವನ್ನು ಹೆಸರಾಂತ ಚಿತ್ರ ಸಾಹಿತಿ ಡಾ.ವಿ.ನಾಗೇಂದ್ರ ಪ್ರಸಾದ್ ಉದ್ಘಾಟಿಸುವರು. ಕರ್ನಾಟಕ ಲೇಖಕಿಯರ ಸಂಘದ ನಿಕಟ ಪೂರ್ವ ಅಧ್ಯಕ್ಷೆ ಡಾ.ಎಚ್.ಎಲ್.ಪುಷ್ಪ ಕವಿ ಗೋಷ್ಠಿಯ ದಿಕ್ಸೂಚಿ ಭಾಷಣ ಮಾಡುವರು. ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ಅಧ್ಯಕ್ಷತೆ ವಹಿಸುವರು. ಕರ್ನಾಟಕ ಸಂಘದ ಅಧ್ಯಕ್ಷ ಡಾ.ಜಯಪ್ರಕಾಶ್‌ಗೌಡ, ಕಸಾಪ ಮಾಜಿ ಜಿಲ್ಲಾಧ್ಯಕ್ಷರಾದ ಡಾ.ಮೀರಾಶಿವ ಲಿಂಗಯ್ಯ, ಪ್ರೊ.ಜಿ.ಟಿ.ವೀರಪ್ಪ, ಡಾ.ಎಚ್.ಎಸ್.ಮುದ್ದೇಗೌಡ, ಕನ್ನಿ ಶಿಲ್ಪ ನವೋದಯ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಎಚ್.ಆರ್. ಕನ್ನಿಕಾ, ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಅಧ್ಯಕ್ಷ ಎಂ.ವಿನಯ್‌ಕುಮಾರ್, ಸಾಹಿತಿ ಡಾ.ಹುಸ್ಕೂರು ಕೃಷ್ಣೇಗೌಡ, ಪ್ರತಿಭಾಂಜಲಿ ಸುಗಮ ಸಂಗೀತ ಅಕಾಡೆಮಿಯ ಡೇವಿಡ್, ಚಿಂತಕ ಧನಂಜಯ ದರಸಗುಪ್ಪೆ ಉಪಸ್ಥಿತರಿರುವರು ಎಂದರು. ಬೆಳಗೆ 7ರಿಂದ ಮಧ್ಯಾಹ್ನ 12ವರೆಗೆ ಗಾಂಧಿ ಭವನದ ಆವರಣದಲ್ಲಿ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಹಾಗೂ ಸಾಂಪ್ರದಾಯಿಕ ಉಡುಗೆ ಸ್ಪರ್ಧೆ ನಡೆಯಲಿದೆ. ಕವನ ವಾಚನ ಮಾಡಲಿಚ್ಛಿಸುವವರು ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸುವರು 9448101081, 9844026804, 9448473715 ಸಂಖ್ಯೆಯನ್ನು ಸಂಪರ್ಕಿಸಿ ನೊಂದಾಯಿಸಿಕೊಳ್ಳುವಂತೆ ಮನವಿ ಮಾಡಿದರು. ಗೋಷ್ಠಿಯಲ್ಲಿ ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಅಧ್ಯಕ್ಷ ಎಂ.ವಿನಯ್‌ಕುಮಾರ್, ಪಿ.ಲೋಕೇಶ್ ಚಂದಗಾಲು, ಧನಂಜಯ ದರಸಗುಪ್ಪೆ, ಕೃಷ್ಣಪ್ಪ, ಲೋಕೇಶ್ ಇದ್ದರು.

# ಆರ್ಥಿಕತೆಗೆ ಕಾರ್ಪೊರೇಟ್ ಪಾತ್ರ ಅಪಾರ




ಮೈಸೂರು: ದೇಶದ ಆರ್ಥಿಕತೆ ಬೆಳವಣಿಗೆಯಲ್ಲಿ ಕಾರ್ಪೊರೇಟ್ ಕಂಪನಿಗಳ ಕಾರ್ಯದರ್ಶಿಗಳ ಪಾತ್ರ ಮಹತ್ವದಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ನಗರದ ಕೆಆರ್‌ಎಸ್ ರಸ್ತೆಯಲ್ಲಿರುವ ಐಸಿಎಸ್‌ಐ–ಮೈಸೂರು ಘಟಕದಲ್ಲಿ ದಿ ಇನ್‌ಸ್ಟಿಟ್ಯೂಷನ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯಾವತಿಯಿಂದ ನಡೆದ 'ಕಾರ್ಪೊರೇಟ್ ಲಾ–360' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕಂಪನಿಗಳ ಕಾನೂನುಗಳ ಪಾಲನೆ ಮತ್ತು ಇನ್ನಿತರ ಮಹತ್ವದ ವಿಚಾರವಾಗಿ ಆಯೋಜಿಸಿರುವ ಈ ಎರಡು ದಿನಗಳ ಕಾರ್ಯಕ್ರಮ ಉದ್ಘಾಟಿಸಿರುವುದು ನನಗೆ ಬಹಳ ಸಂತೋಷದ ವಿಷಯವಾಗಿದೆ ಎಂದು ಶುಭ ಹಾರೈಸಿ ಮಾತನಾಡಿದರು. ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಕಂಪನಿಗಳು ಬಹುಮುಖ್ಯ ಪಾತ್ರ ವಹಿಸುತ್ತವೆ. ಆದರೆ, ಕಂಪನಿಗಳು ಸೂಕ್ತವಾಗಿ ಬೆಳೆಯಲು ಕೇವಲ ವ್ಯವಹಾರವೇ ಸಾಕಾಗುವುದಿಲ್ಲ. ಅವು ಕಾನೂನು ಬದ್ಧವಾಗಿ ನಿಯಮಾನುಸಾರವಾಗಿ ನಡೆಯಬೇಕು. ಅದನ್ನು ಖಚಿತಪಡಿಸಿಕೊಳ್ಳುವಲ್ಲಿ ಕಂಪನಿಗಳು ಕಾರ್ಯದರ್ಶಿಗಳ ಪಾತ್ರ ಬಹಳ ಪ್ರಮುಖವಾಗಿದೆ ಎಂದರು.

ಕಂಪನಿಗಳು ಯಾವ ನಿಯಮಗಳನ್ನು ಪಾಲಿಸಬೇಕು. ಕಾನೂನುಗಳ ವಿಚಾರವಾಗಿ ನಿರ್ಧಾರಗಳನ್ನು ಹೇಗೆ ತೆಗೆದುಕೊಳ್ಳಬೇಕು. ಕಾನೂನುಗಳಿಗೆ ಅನುಗುಣವಾಗಿ ಕಂಪನಿಯನ್ನು ಹೇಗೆ ನಡೆಸಬೇಕು ಎಂಬುದರಲ್ಲಿ ಕಾರ್ಯದರ್ಶಿಗಳು ಪ್ರಮುಖ ಪಾತ್ರ ವಹಿಸುತ್ತಾರೆ. ಅದಕ್ಕಾಗಿ ಕಂಪನಿ ಕಾರ್ಯದರ್ಶಿಗಳ ಸೇವೆಯು ಕೇವಲ ಕಂಪನಿಗಳಿಗೆ ಸೀಮಿತವಾಗಿರುವುದಿಲ್ಲ ಬದಲಿಗೆ ದೇಶದ ಅಭಿವೃದ್ಧಿಗೂ ಮುಖ್ಯವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಗೋಪಾಲಕೃಷ್ಣ ಹೆಗಡೆ, ನಾಗೇಂದ್ರ ರಾವ್, ಮಂಜುಗೌಡ, ಅಭಿಷೇಕ್ ಭಾರದ್ವಜ್, ಕೀರ್ತನ ಗೋಪಾಲ್ ಇನ್ನಿತರರು ಉಪಸ್ಥಿತರಿದ್ದರು.

# ಮೂಲ ಸೌಕರ್ಯ ಒದಗಿಸಲು ಸೂಚನೆ

## ಶಾಸಕ ದರ್ಶನ್ ಪುಟ್ಟಣ್ಣಯ ಹೇಳಿಕೆ । ವೈರಮುಡಿ ಉತ್ಸವ ಪೂರ್ವಭಾವಿ ಸಭೆ






ಪಾಂಡವಪುರ: ವೈರಮುಡಿ ಬ್ರಹ್ಮೋತ್ಸವದಲ್ಲಿ ಯಾವುದೇ ಲೋಪದೋಷಗಳಾಗದಂತೆ, ಭಕ್ತರಿಗೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲು ಸೂಕ್ತ ಕ್ರಮ ವಹಿಸಬೇಕು ಎಂದು ಮೇಲುಕೋಟೆ ವಿಧಾನ ಸಭಾ ಕ್ಷೇತ್ರ ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.



ಮೇಲು ಕೋಟೆ ಪ್ರವಾಸಿ ಮಂದಿರದಲ್ಲಿ ನಡೆದ ಮೇಲು ಕೋಟೆಯ ಐತಿಹಾಸಿಕ ವೈರ ಮುಡಿ ಬ್ರಹ್ಮೋತ್ಸವದ ಪೂರ್ವ ಭಾವಿ ಸಿದ್ಧತೆಗಳ ಕುರಿತು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ವೈರಮುಡಿ ಉತ್ಸವದಲ್ಲಿ ಲಕ್ಷಾಂತರ ಭಕ್ತಾಗಳು ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಭಕ್ತರಿಗೆ ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯ ಕಲ್ಪಿಸುವುದರ ಜತೆಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಅಧಿಕಾರಿಗಳು ಈಗಿನಿಂದಲೇ ಕಾರ್ಯಪ್ರೌವೃತ್ತರಾಗಬೇಕು ಎಂದರು. ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆಯಿರುವುದರಿಂದ ಕಟ್ಟುನಿಟ್ಟಿನ ಭದ್ರತೆ, ಸುಗಮ ಜನಸಂದಣಿ ನಿರ್ವಹಣೆ ಮತ್ತು ಕುಡಿಯುವ ನೀರಿನ ವ್ಯವಸ್ಥೆಗೆ ಆದ್ಯತೆ ನೀಡಲು ಸೂಚಿಸಿದರು

ಶೌಚಾಲಯ, ವೈದ್ಯಕೀಯ ಸೌಲಭ್ಯ ಮತ್ತು ಕೆಎಸ್‌ಆರ್‌ಟಿಸಿ ಬಸ್ ಸೌಲಭ್ಯಗ ಳನ್ನು ಸಮರ್ಪಕವಾಗಿ ಒದಗಿಸಲು ನಿರ್ದೇಶನ ನೀಡಲಾಯಿತು.

### ಚಲುವನಾರಾಯಣಸ್ವಾಮಿಗೆ ವಜ್ರಖಚಿತ ಕಿರೀಟಧಾರಣೆ

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿಗಳಾದ ಡಾ. ಕುಮಾರ ಅವರು ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಮಾರ್ಚ್ 28 ರಂದು ನಡೆಯುವ ವಿಶ್ವವಿಖ್ಯಾತ ವೈರಮುಡಿ ಬ್ರಹ್ಮೋತ್ಸವವು ಶ್ರೀ ಚಲುವನಾರಾಯಣಸ್ವಾಮಿಗೆ ವಜ್ರಖಚಿತ ಕಿರೀಟಧಾರಣೆ ಮಾಡಿ, ರತ್ನಖಚಿತ ಆಭರಣಗಳಿಂದ ಅಲಂಕರಿಸಿ, ರಾತ್ರಿ ವೇಳೆ ನಡೆಯುವ ಅದ್ದೂರಿ ಉತ್ಸವದಲ್ಲಿ ಭಕ್ತಾದಿಗಳಿಗೆ ದರ್ಶನಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವಂತೆ ಬ್ಯಾರಿಕೆಡ್ ವ್ಯವಸ್ಥೆ ಅಳವಡಿಸಬೇಕು ಮತ್ತು ಸುಚಿತ್ವ ಕಾಪಾಡಿಕೊಳ್ಳಬೇಕು ಹಾಗೂ ದೇವಸ್ಥಾನ ಒಳಗೆ ಮಾಧ್ಯಮದವರಿಗೆ ಪ್ರತ್ಯೇಕ ಗ್ಯಾಲರಿ ಅನ್ನು ಮಾಡುವಂತೆ ಸೂಚಿಸಿದರು. ಏಪ್ರಿಲ್ 1 ರಂದು ಮೇಲುಕೋಟೆಯ ಪುರಾಣ ಪ್ರಸಿದ್ಧ ಪಂಚ ಕಲ್ಯಾಣಿಯಲ್ಲಿ ತೆಪ್ಪೋತ್ಸವ ನಡೆಯುವುದರಿಂದ ಕಲ್ಯಾಣಿಯನ್ನು ವೀಕ್ಷಣೆ ಮಾಡಿ ಭಕ್ತಾದಿಗಳಿಗೆ ತೊಂದರೆಯಾಗದಂತೆ ಸೂಕ್ತ ಕ್ರಮ ವಹಿಸಬೇಕು ಹಾಗೂ ಭಕ್ತಾದಿಗಳಿಗೆ ಸ್ನಾನ ಗೃಹ ಮತ್ತು ತಾತ್ಕಾಲಿಕ ಶೌಚಾಲಯದ ವ್ಯವಸ್ಥೆ ಹಾಗೂ ಲೈಟಿಂಗ್ ವ್ಯವಸ್ಥೆ ಕಲ್ಪಿಸಬೇಕು ಎಂದು ತಿಳಿಸಿದರು. ಮೇಲುಕೋಟೆ ಖಅಖ ತಾಂತ್ರಿಕ ಶಿಕ್ಷಣ ಸಂಸ್ಥೆ ಹಿಂಭಾಗ ನಾಲ್ಕು ಚಕ್ರದ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುಬೇಕು ಹಾಗೂ ಪಾರ್ಕಿಂಗ್ ಸ್ಥಳದಲ್ಲಿ ಲೈಟಿಂಗ್ ವ್ಯವಸ್ಥೆ ಕಲ್ಪಿಸುವಂತೆ ಸೂಚಿಸಿದರು. ಪಾರ್ಕಿಂಗ್ ಸ್ಥಳಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಿ ಸೂಚನ ಬೋರ್ಡ್ ಹಾಕಬೇಕು ಮತ್ತು ಸ್ವಚ್ಛತೆ ಕಾಪಾಡುವಂತೆ ಸೂಚಿಸಿದರು. ಮಾರ್ಚ್ 28 ರಂದು ಅರೋಗ್ಯ ಅಧಿಕಾರಿಗಳು ದೇವಸ್ಥಾನ, ಪಾರ್ಕಿಂಗ್, ದಾಸೋಹ ಭವನ 3 ಕಡೆ ಗ್ಯಾಲರಿ ಮಾಡಿ ಅರೋಗ್ಯ ಅಧಿಕಾರಿಗಳನ್ನು ನೇಮಿಸಬೇಕು ಮತ್ತು ಪ್ರಾಥಮಿಕ ಚಿಕಿತ್ಸೆಯ ಎಲ್ಲಾ ರೀತಿಯ ಔಷಧಿಗಳ ವ್ಯವಸ್ಥೆ ಮಾಡುವಂತೆ ಸೂಚಿಸಿದರು.



ಜನದಟ್ಟಣೆಯನ್ನು ನಿಯಂತ್ರಿಸಲು ಮತ್ತು ಉತ್ಸವದ ಮೆರವಣಿಗೆ ಸುಗಮವಾಗಿ ಸಾಗಲು ಸೂಕ್ತ ಬ್ಯಾರಿಕೇಡ್ಗಳನ್ನು ಅಳವಡಿಸಲು ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರು ಡಾ. ಶೋಭಾರಾಣಿ ವಿ. ಜೆ, ಮುಜರಾಯಿ ಇಲಾಖೆಯ ತಹಶೀಲ್ದಾರ್ ತಮ್ಮಣ್ಣ ಗೌಡ, ಮೇಲುಕೋಟೆ ದೇವಸ್ಥಾನದ ಕಾರ್ಯ ನಿರ್ವಹಕಧಿಕಾರಿ ಶೀಲಾ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.



# ಎ.26ಕ್ಕೆ ಸಾಮೂಹಿಕ ವಿವಾಹ

ಮೈಸೂರು: ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ ವತಿಯಿಂದ ಏ.26ರ ಭಾನುವಾರ ನಗರದ ಲಷ್ಕರ್ ಮೊಹಲ್ಲಾದ ಗೀತಾ ಮಂದಿರದಲ್ಲಿ ಉಚಿತ ಸಾಮೂಹಿಕ ವಿವಾಹ ಆಯೋಜಿಸಿದ್ದು, ಪ್ರಯೋಜನ ಪಡೆಯಲಿಚ್ಛಿಸುವವರು ಏ.15ರ ಮುನ್ನ ನೋಂದಣಿ ಮಾಡಿಕೊಳ್ಳಬೇಕೆಂದು ಸಂಸ್ಥಾಪಕ ಅಧ್ಯಕ್ಷ ಡಾ. ಕಸ್ತೂರಿ ಚಂದ್ರು ಮನವಿ ಮಾಡಿದರು.

ಈಗಾಗಲೇ ನಾಲ್ಕು ಜೋಡಿಗಳ ಆಯ್ಕೆ ನಡೆದಿದೆ. ಇತರರು ನೋಂದಣಿ ಮಾಡಿಕೊಂಡಲ್ಲಿ ಅವಕಾಶ ಇದೆ. ವಧುವಿಗೆ ಚಿನ್ನದ ಮಾಂಗಲ್ಯ, ಸೀರೆ, ಕುಪ್ಪಸ, ಕಾಲುಂಗುರ, ವರನಿಗೆ ಪಂಚೆ, ವಲ್ಲಿ, ಶರ್ಟ್ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ದೂ. 88676 88676 ನ್ನು ಸಂಪರ್ಕಿಸಬಹುದಾಗಿದೆ ಎಂದು. ನಗ ರಾಧ್ಯಕ್ಷ ಮೌಲ್ಯ, ರೂಪಾ, ಅಮಿನಾ ಬೇಗಂ, ತೇಜಸ್ ಪೃಥ್ವಿರಾಜ್, ಶಿವರಾಜು ಇದ್ದರು.




# ವಿಜೃಂಭಣೆಯ ಯುಗಾದಿ ಹಬ್ಬ ಆಚರಣೆ



ಗುಂಡ್ಲುಪೇಟೆ: ಯುಗಾದಿ ಎಂದರೆ ಭಾರತೀಯರಿಗೆ ಹಿಂದೂ ಸಂಪ್ರದಾಯದಂತೆ ಹೊಸ ವರ್ಷ ಎಂಬುದು ಪ್ರತೀತಿ ಯುಗಾದಿಯ ದಿನ ಎಣ್ಣೆ ಸ್ನಾನ ಮಾಡಿ ಹೊಸ ಬಟ್ಟೆ ಧರಿಸಿ, ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವುದು ವಾಡಿಕೆ, ಅದೇ ರೀತಿ ತಾಲ್ಲೂಕಿನಾದ್ಯಂತ ಎಲ್ಲಾ ಗ್ರಾಮ ದಲ್ಲಿಯೂ ಸಂಭ್ರಮದಿಂದ ಯುಗಾದಿ ಆಚರಣೆ ಮಾಡಿದರೆ ಹಂಗಳ ಮತ್ತು ದೇವರಹಳ್ಳಿ ಗ್ರಾಮದಲ್ಲಿ ವಿಜೃಂಭಣೆಯಿಂದ ಯುಗಾದಿ ಅಚರಿಸಿಕೊಂಡು ಬಂದಿದ್ದಾರೆ.

ಹಂಗಳ ಗ್ರಾಮದಲ್ಲಿ ಬೆಳಿಗ್ಗೆ ಎಂಟು ಗಂಟೆಗೆ ಗ್ರಾಮದ ಹನ್ನೆರಡು ಮನೆತನದಿಂದ ಹೊನ್ನೇರು ಕಟ್ಟಿ ಗ್ರಾಮದ ಮಾರಿಗುಡಿಯಿಂದ ಬಸವನ ಗುಡಿವರೆಗೆ ಮಂಗಳ ವಾದ್ಯದ ಜೊತೆ ಹೊನ್ನೇರು ಕಟ್ಟಿದ ಎತ್ತುಗಳ ಮೆರವಣಿಗೆ ಮಂಗಲವಾದ್ಯಗಳ ಮೂಲಕ ಸಾಗಿಬರುತ್ತದೆ.

ನಂತರ ಬಸವೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ ಗ್ರಾಮದ ಪುರುಷರು, ಮಹಿಳೆಯರಿಂದ ಮಕ್ಕಳಾದಿಯಾಗಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಮನೆ ಮನೆಗೆ ನೆಂಟರಿಷ್ಟರು ಗ್ರಾಮದ ಮುಖಂಡರ ಮನೆಗೆ ಆಶಿರ್ವಾದ ಪಡೆಯಲು ತೆರಳುತ್ತಾರೆ ಗ್ರಾಮಸ್ಥರು, ಮುಖಂಡರು ಮಠದ ಶ್ರೀಗಳಾದಿಯಾಗಿ ಎಲ್ಲರೂ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾರೆ. ತಾಲ್ಲೂಕಿನ ದೇವರಹಳ್ಳಿ ಗ್ರಾಮದಲ್ಲಿ ಯುಗಾದಿ ಹಬ್ಬವನ್ನು ವಿಜೃಂಭಣೆಯಿಂದ ಮಾಡಿಕೊಂಡು ಬರುತಿದ್ದು ನೂರಾರು ವರ್ಷ ದಿಂದ ಎತ್ತಿನ ಹಬ್ಬ ನಡೆದುಕೊಂಡು ಬರು ತ್ತಿದ್ದು ಇದನ್ನು ನೋಡಲು ವಿವಿದ ಗ್ರಾಮಗ ಳಿಂದ ಅಗಮಿಸಿ ಎತ್ತಿನಹಬ್ಬ ಕಣ್ತುಂಬಿ ಕೊಳ್ಳುತ್ತಾರೆ. ಎತ್ತುಗಳಿಗೆ ಅರೋಗ್ಯ ಸಮಸ್ಯೆ ಇದ್ದರೆ ಗುಣವಾಗಲಿ ಎಂದು ಹರಕೆ ಹೊತ್ತು ಎತ್ತಿಗೆ ಹಗ್ಗ ಕಟ್ಟಿ ಓಡಲು ಬಿಡುತ್ತಾರೆ ಯುವಕರು ಎತ್ತನ್ನು ಹಿಡಿದು ಕಟ್ಟಿಹಾಕಲು ಯತ್ನಿಸುವ ಹಬ್ಬವೇ ಎತ್ತಿನ ಹಬ್ಬ ಇದನ್ನು ನೋಡಲು ನೂರಾರು ಸಂಖ್ಯೆಯಲ್ಲಿ ಗ್ರಾಮದ ದೇವಸ್ಥಾನ ಜಗಲಿಕಟ್ಟೆ ರಸ್ತೆಯಲ್ಲಿ ಜನವೋ ಜನ, ಅಗಾಗಿ ತಾಲ್ಲುಕಿನಲ್ಲಿ ವಿಸಿಷ್ಟವಾಗಿ ಇವೆರಡು ಗ್ರಾಮಗಳಲ್ಲಿ ಯುಗಾದಿ ಅಚರಣೆ ನಡೆದುಕೊಂಡು ಬಂದಿದೆ.

ಮೊದಲ ಪುಟದಿಂದ

## 'ಲಾಕಪ್ ಡೆತ್': ಶವವಿಟ್ಟು ಪ್ರತಿಭಟನೆ

ಸಿಓಡಿಗೆ ವಹಿಸಬೇಕು ಎಂದು ಪಟ್ಟು ಹಿಡಿದರು. ವಿಚಾರ ತಿಳಿದ ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ, ಮಾಜಿ ಶಾಸಕ ಕೆ.ಎಸ್. ಕಿರಣ್ ಕುಮಾರ್ ಠಾಣೆಗೆ ಭೇಟಿ ನೀಡಿ ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಘಟನೆಯ ಕುರಿತು ನಿಷ್ಪಕ್ಷಪಾತ ತನಿಖೆಯಾಗಬೇಕು ಎಂದು ಅವರು ಒತ್ತಾಯಿಸಿದರು. ಮಧ್ಯರಾತ್ರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್ ಸ್ಥಳಕ್ಕೆ ಆಗಮಿಸಿ ಪರಿಸ್ಥಿತಿಯನ್ನು ಪರಿಶೀಲಿಸಿದರು.

ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರವಷ್ಟೇ ಸಾವಿಗೆ ನಿಖರ ಕಾರಣ ತಿಳಿಯಲಿದೆ. ಒಂದು ವೇಳೆ ಪೊಲೀಸರ ಕಡೆಯಿಂದ ಲೋಪವಾಗಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಭರವಸೆ ನೀಡಿದ್ದಾರೆ. ಮುನ್ನೆಚ್ಚರಿಕಾ ಕ್ರಮವಾಗಿ ಹುಳಿಯಾರು ಪಟ್ಟಣದಲ್ಲಿ ಹೆಚ್ಚಿನ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿದೆ.

ಎನ್.ಶ್ರೀನಿವಾಸನ್ ಹೇಳಿಕೆ

# ವರ್ಷಾರಂಭದ ಮೊದಲ ದಿನವೇ ಯುಗಾದಿ



ಮೈಸೂರು: ಸಂವತ್ಸರಾದಿ ಅಕ್ಷರಶಃ' ವರ್ಷದ ಆರಂಭ'. ಯುಗ ಎಂದರೆ "ಯುಗ" ಮತ್ತು ಆದಿ ಎಂದರೆ "ಆರಂಭ" ಎಂದೂ ಕರೆಯಲ್ಪಡುವ ಈ ಹಬ್ಬವು ಹಿಂದೂ ಕ್ಯಾಲೆಂಡರ್‌ನಲ್ಲಿ ವರ್ಷದ ಮೊದಲ ದಿನವಾಗಿದೆ ಎಂದು ವಿಜಯನಗರದ ಶ್ರೀ ಯೋಗಾನರಸಿಂಹ ಸ್ವಾಮಿ ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸ್ ಹೇಳಿದರು.

ಯುಗಾದಿ ಅಂಗವಾಗಿ ದೇವಾಲಯದಲ್ಲಿ ಶ್ರೀ ಸ್ವಾಮಿಗೆ ನಡೆದ ವಿಶೇಷ ಪೂಜಾ ಕೈಂಕರ್ಯದ ಬಳಿದ ಭಕ್ತಾದಿಗಳಿಗೆ ಪ್ರಸಾದ ವಿತರಿಸಿ ಮಾತನಾಡಿದರು. ವರ್ಷದ ಮೊದಲ ದಿನವೇ ಯುಗಾದಿ ಎಂಬುದು ಹಿಂದೂ ಧರ್ಮದ ಪ್ರತೀತಿಯಾಗಿದೆ. ಬೇವು– ಬೆಲ್ಲದ ಸಮಾಗಮದ ಈ ದಿನದಂದು ಆ ಭಗವಂತನು ಎಲ್ಲರಿಗೂ ಸರ್ವಮಂಗಳವನ್ನುಂಟು ಮಾಡಲಿ. ಯೋಗಾನರ ಸಿಂಹ ಸ್ವಾಮಿ ದೇವಾಲಯದ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ನೂತನ ದಿನಚರಿ ( ಕ್ಯಾಲೆಂಡರ್) ಅನ್ನು ದೇಗುಲದ ಸಂಸ್ಥಾಪಕ ನಾಡೋಜ ಪ್ರೊ.ಭಾಷ್ಯಂ ಸ್ವಾಮೀಜಿ ಬಿಡುಗಡೆ ಮಾಡಲಾಗಿದೆ. ಯುಗಾದಿಯಿಂದ ಮುಂದಿನ ಸಾಲಿನ ಯುಗಾದಿವರೆಗಿನ ಧಾರ್ಮಿಕ ಪರಂಪರೆಯುಳ್ಳ ದೇವಾಲಯದ ಎಲ್ಲ ಉತ್ಸವಗಳು ಸೇರಿ ಇನ್ನಿತರ ಅಗತ್ಯ ಮಾಹಿತಿಗಳು ಈ ದಿನಚರಿಯಲ್ಲಿ ಇರುವುದು ವಿಶೇಷ ಎಂದರು.

ನಯನ ಕುಮಾರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥ ಕೆ.ಬಿ.ಕುಮಾರ್ ಅವರ ಸೇವಾ ಕಾರ್ಯಗಳು ಹೀಗೆ ಮುಂದುವರೆಯಲಿ, ಶ್ರೀ ಸ್ವಾಮಿಯ ಆಶೀರ್ವಾದ ಸದಾ ಅವರ ಮೇಲಿರಲಿ ಹಾಗೂ ನಾಡಿನ ಎಲ್ಲ ಜನರಿಗೂ ಒಳಿತಾಗಲಿ ಎಂದು ಹಾರೈಸಿದರು.

ದೇವಾಲಯದ ಸಂಸ್ಥಾಪಕ ನಾಡೋಜ ಪ್ರೊ.ಭಾಷ್ಯಂ ಸ್ವಾಮೀಜಿ, ನಯನ ಕುಮಾರ್ಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥ ಕೆ.ಬಿ.ಕುಮಾರ್ ದಂಪತಿ, ರಘುಲಾಲ್ ಕಂಪನಿಯ ಮುಖ್ಯಸ್ಥ ರಾಘವ್ ದಂಪತಿ, ಅಸ್ಕರ್ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಸೂರ್ಯ ನಾರಾಯಣ ರಾಜು ಸೇರಿ ಇನ್ನಿತರರು ಉಪಸ್ಥಿತರಿದ್ದರು.

## ನಾಳೆ ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರಿಗೆ ಸನ್ಮಾನ

ಕೆ.ಆರ್.ನಗರ: ಮೈಸೂರು ಜಿಲ್ಲಾ ಉಪ್ಪಾರ ನೌಕರರ ಹಾಗೂ ವೃತ್ತಿಪರರ ಸಂಘದ ವತಿಯಿಂದ ಮಾ.22ರ ಭಾನುವಾರ ಬೆಳಿಗ್ಗೆ 10ಗಂಟೆಗೆ ಮೈಸೂರು ನಗರದ ಕರ್ನಾಟಕ ಕಲಾಮಂದಿರದಲ್ಲಿ ಸಂಘದ 30ನೇ ವಾರ್ಷಿಕ ಪ್ರತಿಭಾ ಪುರಸ್ಕಾರ, ವಿವಿಧ ಕ್ಷೇತ್ರಗಳ ಸಾಧಕರು ಮತ್ತು ಬಡ್ತಿ ಹೊಂದಿದ ಹಾಗೂ ನಿವೃತ್ತ ನೌಕರರಿಗೆ ಸನ್ಮಾನ



ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಸಂಘದ ಪ್ರಚಾರ ಕಾರ್ಯದರ್ಶಿ ಕೆ.ಟಿ.ಮೋಹನ್ ಕುಮಾರ್ ತಿಳಿಸಿದ್ದಾರೆ.

ಅವರು ಈ ಕುರಿತು ಪತ್ರಿಕಾ ಹೇಳಿಕೆಯನ್ನು ನೀಡಿ ಹೊಸದುರ್ಗದ ಭಗೀರಥ ಪೀಠದ ಜಗದ್ಗುರುಗಳಾದ ಡಾ.ಪುರುಷೋತ್ತಮಾನಂದ ಪುರಿ ಮಹಾಸ್ವಾಮೀಜಿಗಳು ಹಾಗೂ ಮಳವಳ್ಳಿಯ ಐಯ್ಯನ ಸರಗೂರು ಮಠದ ಶ್ರೀ ಮಹದೇವಸ್ವಾಮಿಗಳು ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಲಿದ್ದಾರೆ, ಚಾಮರಾಜನಗರ ಕ್ಷೇತ್ರದ ಶಾಸಕರು ಹಾಗೂ ಎಂ ಎಸ್ ಐ ಎಲ್ ಅಧ್ಯಕ್ಷರಾದ ಸಿ.ಪುಟ್ಟರಂಗಶೆಟ್ಟಿ ಅವರು ಸಮಾರಂಭವನ್ನು ಉದ್ಘಾಟನೆ ಮಾಡಲಿದ್ದು, ಶ್ರೀ ಭಗೀರಥರ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಜಿ ಎಸ್ ಟಿ ಆಫೀಲು ನ್ಯಾಯಾಧಿಕರಣದ ತಾಂತ್ರಿಕ ಸದಸ್ಯರಾದ (ಕರ್ನಾಟಕ ರಾಜ್ಯ) ಡಿ.ಜಗನ್ನಾಥ್ ಸಾಗರ್ ನೆರವೇರಿಸಲಿದ್ದು, ಶ್ರೀ ಭಗೀರಥ ವಿದ್ಯಾಶ್ರೀ ಪ್ರಶಸ್ತಿಯನ್ನು ಕೆಎಂಎಫ್ ನಿರ್ದೇಶಕಿ ಶೀಲಾ ಪುಟ್ಟರಂಗಶೆಟ್ಟಿ ಪ್ರಧಾನ ಮಾಡಲಿರುವ ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಎಂ.ರಾಮಚಂದ್ರು ವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಈ ಕಾರ್ಯಕ್ರಮದಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳ ಎಸ್ ಎಸ್ ಎಲ್ ಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳಲ್ಲಿ ಅತಿ ಹೆಚ್ಚಿನ ಅಂಕಗಳಿಸಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು. ವಿವಿಧ ಇಲಾಖೆಗಳಲ್ಲಿ ಬಡ್ತಿ ಹೊಂದಿರುವ ನೌಕರರು ಹಾಗೂ ನಿವೃತ್ತ ನೌಕರರು ಮತ್ತು ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಸೇವೆಯನ್ನು ಮಾಡುತ್ತಿರುವ ಸಮಾಜದ ಸಾಧಕರುಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿದೆ. ಕಾರ್ಯಕ್ರಮದಲ್ಲಿ ವಿವಿಧ ಜನಪ್ರತಿನಿಧಿಗಳು, ಮುಖಂಡರುಗಳು, ಸಂಘ-ಸಂಸ್ಥೆಗಳವರು, ಅಧಿಕಾರಿಗಳು ಸೇರಿದಂತೆ ಹಲವು ಗಣ್ಯರುಗಳು ಭಾಗವಹಿಸಲಿದ್ದಾರೆ. ಈ ಸಮಾರಂಭಕ್ಕೆ ಉಪ್ಪಾರ ಸಮಾಜದ ಬಂಧುಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿ ಮಾಡಬೇಕೆಂದು ಮನವಿ ಮಾಡಿದ್ದಾರೆ.

## ವಿದ್ಯುತ್ ವ್ಯತ್ಯಯ

ಮೈಸೂರು:- ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ 220/66/11 ಕೆ.ವಿ ಹೂಟಗಳ್ಳಿ ಸ್ವೀಕರಣಾ ಕೇಂದ್ರ 66/11 ಕೆ.ವಿ ಹೆಬ್ಬಾಳ್, 66/11 ಕೆ.ವಿ ಮೇಟಗಳ್ಳಿ ಮತ್ತು 66/11 ಕೆ.ವಿ ಉದ್ಬೂರು ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ 4ನೇ ತ್ರೈಮಾಸಿಕ ನಿರ್ವಹಣಾ ಕೆಲಸದ ನಿಮಿತ್ತ ಮಾರ್ಚ್ 21 ರಂದು ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 6:00 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

**ವಿವರ ಇಂತಿದೆ:**

**1. 220/66/11 ಕೆ.ವಿ ಹೂಟಗಳ್ಳಿ ಸ್ವೀಕರಣಾ ಕೇಂದ್ರದ ವ್ಯಾಪ್ತಿಯ ಪ್ರದೇಶಗಳು:** ಆಟೋಮೋಟಿವ್ ಆಕ್ಸಿಲ್ ಸುತ್ತಮುತ್ತ, ರಾಣೆ




ಮದ್ರಾಸ್ ಪಕ್ಕದ ರಸ್ತೆ, ಹೆಚ್.ಟಿ. ರೆಕೆಟ್ ಬೆನ್‌ಸರ್, ಕೂರ್ಗಳ್ಳಿ ಕೈಗಾರಿಕ ಪ್ರದೇಶ, ಹೂಟಗಳ್ಳಿ ಕೈಗಾರಿಕ ಪ್ರದೇಶ, ಹಳೇ ಲೂನಾರ್ಸ್, ತಿಯೋರೆಮ್ಸ್, ಸ್ಪಕ್ರಾ ಪೈಪ್ಸ್, ವರ್ಷ ಕೇಬಲ್, ಎಲ್& ಟಿ, ವಿಪ್ರೋ ಲೈಟ್ಸ್, ಶ್ರೀರಾಮ್ ಇಂಜಿನಿಯರ್ಸ್, ರಜತ್ ಬ್ಯಾಟರಿ, ಆರ್.ಪಿ.ಜಿ ಕೇಬಲ್, ಜಿಮ್‌ಕೋ, ಸ್ಪೈ, ಎಂಪ್ರೋ ಕಾಂಕ್ರಿಟ್, ಡ್ಯಾಮ್‌ಡನ್ ಆಪಾರ್ಟ್ಮೆಂಟ್, ಹಿನಕಲ್ ಆಶ್ರಯ ಯೋಜನೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು.

**2. 66/11 ಕೆ.ವಿ ಹೆಬ್ಬಾಳ್ ವಿದ್ಯುತ್ ವಿತರಣಾಕೇಂದ್ರದ ವ್ಯಾಪ್ತಿಯ ಪ್ರದೇಶಗಳು:** ಹೆಬ್ಬಾಳ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಕುಂಬಾರ್‌ಕೊಪ್ಪಲು, ಟೋಲ್‌ಗೇಟ್, ವಾಣಿವಿಲಾಸ ಲೇಔಟ್, ಮಹದೇಶ್ವರ ಬಡಾವಣೆ, ಸುಭಾಷ್ ನಗರ, ಸೂರ್ಯ ಬೇಕರಿ, ವಿಜಯನಗರ, ರೈಲ್ವೆ ಲೇಔಟ್, ಅಭಿಷೇಕ್ ವೃತ್ತ, ಮಾದೇಗೌಡ ವೃತ್ತ, ಎಂ.ಜಿ.ಕೊಪ್ಪಲು, ಹೊರ ವರ್ತುಲ ರಸ್ತೆ, ಹಂಪಿ ವೃತ್ತ, ಸಂಗಮ್ ವೃತ್ತ, ಂಡಿಭಿಜಟಠಂಥಿ ಆಫೀಸ್ ಸುತ್ತ ಮುತ್ತ, ಕೆ.ಐ.ಎ.ಡಿ.ಬಿ ಕೈಗಾರಿಕಾ ಹೌಸಿಂಗ್ ಲೇಔಟ್, ಎಲ್&ಟಿ ಫ್ಯಾಕ್ಟರಿ ಸುತ್ತ ಮುತ್ತಲಿನ ಪ್ರದೇಶ, ರಾಣೆ ಮದ್ರಾಸ್ ಸುತ್ತ ಮುತ್ತಲಿನ ಪ್ರದೇಶಗಳು ಹಾಗೂ ಜೆ.ಕೆ ಟೈರ್ಸ್, ಮೈಸೂರು ಸ್ಟೀಲ್ಸ್ ಇ.ಹೆಚ್.ಟಿ ಬಳಕೆದಾರರಿಗೆ.

**3. 66/11 ಕೆ.ವಿ ಮೇಟಗಳ್ಳಿ ವಿದ್ಯುತ್ ವಿತರಣಾಕೇಂದ್ರದ ವ್ಯಾಪ್ತಿಯ ಪ್ರದೇಶಗಳು:** ಮೇಟಗಳ್ಳಿ ವ್ಯಾಪ್ತಿಯ ಹೆಬ್ಬಾಳ್ ಕೈಗಾರಿಕ ಪ್ರದೇಶ, ಮೇಟಗಳ್ಳಿ, ಬೃಂದಾವನ ಬಡಾವಣೆ, ಲೋಕನಾಯಕ ನಗರ, ಜಯದೇವ ನಗರ, ಬಿ.ಎಂ.ಶ್ರೀನಗರ, ಹೆಬ್ಬಾಳ್ ಹೊರ ವರ್ತುಲ ರಸ್ತೆ, ಊಕಅಐಉಂಖ ಪ್ಲ್ಯಾಂಟ್ ಸುತ್ತಮುತ್ತ, ಹೆಬ್ಬಾಳ್ 1ನೇ, 2ನೇ ಹಾಗೂ 3ನೇ ಹಂತ, ಸುಬ್ರಹ್ಮಣ್ಯನಗರ, ಬಸವನಗುಡಿ, ಎಸ್.ಬಿ.ಎಂ ಬ್ಯಾಂಕ್ ಸುತ್ತ ಮುತ್ತ, ಹೆಬ್ಬಾಳ್ ಕಾಲೋನಿ, ಹೆಬ್ಬಾಳ್ ಮುಖ್ಯರಸ್ತೆ, ಲಕ್ಷ್ಮೀಕಾಂತ ನಗರ, ಸಂಕ್ರಾಂತಿ ವೃತ್ತ, ಗೋಲ್ಡನ್ ಬೇಕರಿ, ಕೆ.ಐ.ಎ.ಡಿ.ಬಿ ಲೇಔಟ್, ಮಯೂರ ವೃತ್ತ, ಕಾವೇರಿ ವೃತ್ತ, ಮಿಲಿಟರಿ ಕ್ವಾಟ್ರಸ್, ಆರ್.ಬಿ.ಐ, ವಿಕ್ರಾಂತ್ ಮೇನ್ ಪ್ಲ್ಯಾಂಟ್ ಮತ್ತು ಶಿವಮೊಗ್ಗ ಸ್ಟೀಲ್ಸ್ ಸುತ್ತ ಮುತ್ತಲಿನ ಪ್ರದೇಶಗಳು. ಬೆಳಗೊಳ ಕೈಗಾರಿಕ ಪ್ರದೇಶ, ಕೆ.ಆರ್.ಎಸ್‌ರಸ್ತೆ, ಭೈರವೇಶ್ವರನಗರ, ಬಸವೇಶ್ವರನಗರ, ಮೇಟಗಳ್ಳಿ ಕೈಗಾರಿಕ ಪ್ರದೇಶ ಹಾಗೂ ಸುತ್ತ ಮುತ್ತಲಿನ ಪ್ರದೇಶ.

4. 66/11 ಕೆ.ವಿಉದ್ಬೂರುವಿದ್ಯುತ್ ವಿತರಣಾಕೇಂದ್ರದ ವ್ಯಾಪ್ತಿಯ ಪ್ರದೇಶಗಳು: ಧನಗಳ್ಳಿ, ಸಾಲುಂಡಿ, ಕೆಲ್ಲಹಳ್ಳಿ, ಉದ್ಬೂರು, ಟಿ ಕಾಟೂರುಮತ್ತು ಸುತ್ತಮುತ್ತಲಿನ ಪ್ರದೇಶಗಳು.

5. M/s JK Tyre Main & Radial Plant, M/s, Siderforge ನ ಇ.ಹೆಚ್.ಟಿ ಬಳಕೆದಾರರಿಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾ.ವಿ.ಸ.ನಿ.ನಿ., ವಿ.ವಿ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನ್ಯಾ.ನಾಗಮೋಹನ್ ದಾಸ್ ವರದಿ ರದ್ದುಪಡಿಸಲು ಆಗ್ರಹ

ಚಾಮರಾಜನಗರ, ಅವೈಜ್ಞಾನಿಕ, ಅಸಂವಿಧಾನಿಕ ವಾಗಿರುವ ನ್ಯಾ.ನಾಗಮೋಹನ್ ವರದಿಯನ್ನು ರದ್ದುಪಡಿಸಬೇಕು ಎಂದು ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ಅಧ್ಯಕ್ಷ ಡಾ.ವಿ.ಎನ್.ಮಹದೇವಯ್ಯ ಸರ್ಕಾರವನ್ನು ಒತ್ತಾಯಿಸಿದರು.




ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಒಳಮೀಸಲಾತಿ ವಿಚಾರದಲ್ಲಿ ಸಮಾಜ ಇಲಾಖೆ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಅವರನ್ನು ಗುರಿಯಾಗಿಸುವುದು, ನಿಂದಿಸುವುದು ಸರಿಯಲ್ಲ .ಇತ್ತೀಚಿಗೆ ಕೊಳ್ಳೇಗಾಲದಲ್ಲಿ ನಡೆದ ಒಳ ಮೀಸಲಾತಿ ವಿರೋಧಿಸಿ ನಡದ ಪ್ರತಿಭಟನೆಯಲ್ಲಿ ಮಹದೇವಪ್ಪ ಸೇರಿದಂತೆ ಸಮುದಾಯ ಸಚಿವರು, ಸ್ವಾಮೀಜಿ ಅವರ ಭಾವಚಿತ್ರಕ್ಕೆ ಚಪ್ಪಲಿ ಸೇವೆ ಮಾಡಿರುವುದಕ್ಕೆ ನಮ್ಮ ಸಂಘಟನೆಯಿಂದ ಕ್ಷಮೆ ಯಾಚಿಸುತ್ತೇವೆ. ಆ ಘಟನೆಯನ್ನು ಖಂಡಿಸುತ್ತೇವೆ ಎಂದರು.

ಒಳ ಮೀಸಲಾತಿ ಎಂಬುದು ಮೀಸಲಾತಿ ಪಡೆಯುತ್ತಿರುವ ಎಸ್.ಸಿ ಪಟ್ಟಿಯಲ್ಲಿರುವ ಎಲ್ಲಾ ಅಸ್ಪೃಶ್ಯ ಜಾತಿ ಸಮುದಾಯಗಳಿಗೂ ಸಂಬಂಧಿಸಿದ್ದು.ಅದರಲ್ಲಿ ಪ್ರಸ್ತುತ ಎಡಗೈ ಸಂಬಂಧಿತ ಮತ್ತು ಬಲಗೈ ಸಂಬಂಧಿತ ಎಂಬ ಎರಡು ಗುಂಪುಗಳಾಗಿದೆ. 17% ಮೀಸಲಾತಿಯನ್ನು ಎಡಗೈ ಬಲಗೈ ಸಮುದಾಯಗಳು ಹಂಚಿಕೊಳ್ಳುವುದರಲ್ಲಿ ದೊಡ್ಡ ಬಿಕ್ಕಟ್ಟು ಉಂಟಾಗಿದೆ. ಶಿಕ್ಷಣ, ಉದ್ಯೋಗ ರಾಜಕಾರಣ ಮತ್ತು ಇತರೆ ಕ್ಷೇತ್ರಗಳಲ್ಲಿ ಒಳಮೀಸಲಾತಿ ಅನುಷ್ಠಾನಗೊಳಿಸುವಾಗ ಯಾರಿಗೂ ತೊಂದರೆಗಯಾಗಬಾರದು. "ರೋಸ್ಟರ್ ಬಿಂದು ಎಸ್.ಸಿ ಪಟ್ಟಿಯಲ್ಲಿರುವ ಎಡಗೈ ಬಲಗೈ ಸಂಬಂಧಿತ ಎರಡು ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಸಿಗುವಂತೆ ಸೂತ್ರವನ್ನು ರೂಪಿಸಿಬೇಕು. ಈ ಸಮಸ್ಯೆ ಪರಿಹರಿಸುವ ಜವಾಬ್ದಾರಿ ಸದ್ಯಕ್ಕೆ ಸರ್ಕಾರದ ಮೇಲಿದೆ. ಮುಖ್ಯಮಂತ್ರಿಗಳು, ಎಡಗೈ ಬಲಗೈ ಸಚಿವರು ಮತ್ತು ಶಾಸಕರುಗಳು ಇದನ್ನು ಒಮ್ಮತದಿಂದ ಸಹನೆ ತಾಳ್ಮೆಯಿಂದ ಬಗೆಹರಿಸಬೇಕು. ಆದರೆ ಸದ್ಯದ ಪರಿಸ್ಥಿತಿ ದಿಕ್ಕು ತಪ್ಪಿ ಬೇರೆ ಬೇರೆ ಬೆಳವಣಿಗೆಳು ಆಗುತ್ತಿವೆ ಇದನ್ನ ತಾಳ್ಮೆಯಿಂದ ಎಲ್ಲರು ಬಗೆಹರಿಸುವ ಕಡೆ ಗಮನ ಕೊಡಬೇಕು ಎಂದು ಒತ್ತಾಯಿಸಿದರು.

ಒಳಮೀಸಲಾತಿಯಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸಲು ಎಡಗೈ ಬಲಗೈ ಎರಡು ವರ್ಗಗಳ ಸಚಿವರುಗಳು, ಶಾಸಕರು ಪ್ರಮಾಣಿಕ ಪ್ರಯತ್ನ ಮಾಡಬೇಕು. ಎಡಗೈ ಬಲಗೈ ಸಮುದಾಯಗಳು ತಮ್ಮ ತಮ್ಮ ಹಕ್ಕುಗಳಿಗಾಗಿ ಸಂವಿಧಾನದ ವ್ಯಾಪ್ತಿಯಲ್ಲಿ ಹೋರಾಟ ಮಾಡಬೇಕು ಇದು ತಪ್ಪಲ್ಲ. ಈ ನಿಟ್ಟಿನಲ್ಲಿ ಸಾಮಾಜಿಕ ನ್ಯಾಯವನ್ನು ಕೊಡಿಸುವಂತೆ ಸರ್ಕಾರದ ಭಾಗವಾಗಿರುವ ಎಡಗೈ ಬಲಗೈ ಸಚಿವರಿಗೆ ಒತ್ತಡ ಹೇರಬೇಕು. ಆ ಸಚಿವರಗಳ ಮೂಲಕವೇ ಸರ್ಕಾರದ ವಿರುದ್ಧ ಧ್ವನಿ ಎತ್ತಬೇಕು ಎಂದು ಒತ್ತಾಯಿಸಿದರು.

ಈ ಎಲ್ಲಾ ಗೊಂದಲಗಳಿಗೆ ಮತ್ತು ಸಮಸ್ಯೆಗಳಿಗೆ ಮೂಲ ಕಾರಣ ನಾಗಮೋಹನ್ ದಾಸ್ ವರದಿ. ಅವರು ಜಾತಿ ಗಣತಿ ಮಾಡುವಾಗ ಬಹುತೇಕ ಜನರು ಗಣತಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವುದಿಲ್ಲ. ಪ್ರವರ್ಗ ಎ.ಬಿ.ಸಿಪಟ್ಟಿ ಮಾಡಿ ಜಾತಿಗಳನ್ನು ಗುಂಪು ಮಾಡಿರುವುದು ಸಮರ್ಪಕವಾಗಿಲ್ಲ, ಇಡೀ ನಾಗಮೋಹನ ದಾಸ್ ವರದಿ ಅಪೂರ್ಣ ಮತ್ತು ಅವೈಜ್ಞಾನಿಕವಾಗಿದೆ ಹಾಗಾಗಿ ಈ ವರದಿಯನ್ನು ತಿರಸ್ಕರಿಬೇಕು ಎಂದು ಒತ್ತಾಯಿಸಿದರು.

**ಬಲಗೈ ಸಮುದಾಯಗಳ ಒಕ್ಕೂಟ ಹೋರಾಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಮನವಿ**

ಒಳಮೀಸಲಾತಿ ವಿರೋಧಿಸಿ ಬಲಗೈ ಸಮುದಾಯದ ಒಕ್ಕೂಟವು ಮಾ.25 ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನ ದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಇದು ನಮ್ಮ ಉಳಿವಿನ ಪ್ರಶ್ನೆ ಆಗಿದೆ. ಇದೊಂದು ಈ ಐತಿಹಾಸಿಕ ಪ್ರತಿಭಟನೆಗೆ ಜಿಲ್ಲೆಯಿಂದ ಸಮುದಾಯ ಮುಖಂಡರು ಸ್ವಯಂ ಪ್ರೇರಣೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿ ಗೊಳಿಸಿ ಕೊಡಬೇಕು ಎಂದು ಮಹದೇವಯ್ಯ ಮನವಿ ಮಾಡಿದರು. ಜಿ.ಪಂ.ಮಾಜಿ ಸದಸ್ಯ ನಾಗರಾಜು ಕಮಲ್, ಪಿ.ಸಂಘಟನಾ ಮಾತನಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಭಾಗ್ಯ ಉಮ್ಮತ್ತೂರು, ರಾಜೇಂದ್ರ ಹೊನ್ನೂರು, ಮರಿಸ್ವಾಮಿ ಚಾಟೀಪುರ, ಲಿಂಗಣ್ಣ ಉತ್ತಂಬಳ್ಳಿ ಹಾಜರಿದ್ದರು.

# ಕಾಮಗಾರಿ ಗುಣಮಟ್ಟದಿಂದಿರಲಿ

### ಸಂಸದ ಸುನೀಲ್ ಬೋಸ್ ತಾಕೀತು | ಉಸ್ತುವಾರಿ ಸಮಿತಿ ಪರಿಶೀಲನಾ ಸಭೆ

ಚಾಮರಾಜನಗರ: ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳನ್ನು ಗುಣಮಟ್ಟದಿಂದ ನಿರ್ವಹಿಸಬೇಕು. ಅಪಘಾತಗಳಿಗೆ ಅವಕಾಶವಾಗದಂತೆ ಸಮರ್ಪ ಕವಾಗಿ ಎಲ್ಲ ಮುಂಜಾಗ್ರತಾ ವೈಜ್ಞಾನಿಕ ಕ್ರಮಗಳನ್ನು ಕೈಗೊಳ್ಳುವಂತೆ ಸಂಸದ ಸುನೀಲ್ ಬೋಸ್ ಅಧಿಕಾರಿಗಳಿಗೆ ತಾಕೀತು ಮಾಡಿದರು.




ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಕ್ಷೇತ್ರದ ವಿವಿಧ ಭಾಗಗಳಲ್ಲಿ ಕಾಮಗಾರಿ ನಿರ್ವಹಿಸಲಾಗುತ್ತಿದೆ. ಕಾಮಗಾರಿಗಳು ಕಳಪೆ ಎಂಬ ದೂರುಗಳು ಬರುತ್ತಿವೆ. ಸಂಬಂಧಪಟ್ಟ ಅಧಿಕಾರಿಗಳು ಕಾಮಗಾರಿ ಸ್ಥಳಕ್ಕೆ ಖುದ್ದು ಭೇಟಿ ನೀಡಿ ಪರಿಶೀಲಿಸಬೇಕು. ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಕಾಮಗಾರಿಗಳು ನಿರ್ವಹಣೆಯಾಗಬೇಕು. ರಸ್ತೆ ಸುರಕ್ಷತಾ ಕ್ರಮಗಳಿಗೆ ಆದ್ಯತೆ ನೀಡಬೇಕು ಎಂದು ಸೂಚಿಸಿದರು.

ಈ ಹಿಂದಿನ ಸಭೆಯಲ್ಲೂ ಹೆದ್ದಾರಿ ಕಾಮಗಾರಿಗಳನ್ನು ವೈಜ್ಞಾನಿಕವಾಗಿ ಕೈಗೊಂಡು ವಿದ್ಯುತ್ ದೀಪ ಅಳವಡಿಕೆ, ಗುಂಡಿ ಮುಚ್ಚುವುದು, ಎಲ್ಲಿ ಅಪಘಾತಕ್ಕೆ ಸಂಭವಿಸುತ್ತಿದ್ದೆಯೋ ಅಂತಹ ಸ್ಥಳಗಳಲ್ಲಿ ತುರ್ತಾಗಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳ ಕೆಲಸ ಕೈಗೊಳ್ಳಲು ಸೂಚಿಸಲಾಗಿತ್ತು. ನಾನೂ ಸಹ ಖುದ್ದಾಗಿ ಹಲವೆಡೆ ಭೇಟಿ ನೀಡಿ ಪರಿಶೀಲಿಸಿದ್ದೇನೆ. ಆದರೆ ಇನ್ನೂ ಸಹ ಜವಾಬ್ದಾರಿಯುತವಾಗಿ ಅಧಿಕಾರಿಗಳು ಕಾಮಗಾರಿ ನಿರ್ವಹಿಸಿಲ್ಲ. ಇನ್ನು ಮುಂದೆ ಇಂತಹ ಧೋರಣೆ ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ಗುಂಡ್ಲುಪೇಟೆ-ನಂಜನಗೂಡು ಮಾರ್ಗದಲ್ಲಿ ವಾಹನ ದಟ್ಟಣೆ ಹೆಚ್ಚಾಗಿವೆ. ಪ್ರವಾಸಿ ತಾಣಗಳನ್ನು ಸಂಪರ್ಕಿಸುವ ಈ ರಸ್ತೆಯಲ್ಲಿ ಅಪಘಾತಗಳು ಹೆಚ್ಚುತ್ತಿವೆ. ಸೈನ್ ಬೋರ್ಡ್ ಮತ್ತು ಮಿರರ್ ನಂತಹ ಸುಗಮ ಸಂಚಾರಕ್ಕೆ ಮಾರ್ಗದರ್ಶನ ಮಾಡುವ ಫಲಕಗಳನ್ನು ಅಳವಡಿಸಬೇಕು ಎಂದು ನಿರ್ದೇಶನ ನೀಡಿದರು.

ಶಾಸಕ ಸಿ. ಪುಟ್ಟರಂಗಶೆಟ್ಟಿ ಮಾತ ನಾಡಿ ನಗರ ವ್ಯಾಪ್ತಿಯಲ್ಲಿ ಬರುವ ಹೆದ್ದಾರಿ ಯಲ್ಲಿ ಅಪಘಾತ ಸಂಭವಿಸುತ್ತಿವೆ. ಹೀಗಾಗಿ ಬೈಪಾ ಸ್‌ಗಳನ್ನು ನಿರ್ಮಾಣ ಮಾಡುವಂತೆ ಅಧಿಕಾರಿಗ ಳೊಂದಿಗೆ ಪರಿಶೀಲನೆ ನಡೆಸಿ ತಿಳಿಸಲಾಗಿತ್ತು. ಆದರೂ ಸಹ ಇನ್ನೂ ಕ್ರಮ ಕೈಗೊಂಡಿಲ್ಲ. ಎಲ್ಲೆಲ್ಲಿ ಅಗತ್ಯವಿದೆಯೋ ಅಂತಹ ಕಡೆ ತುರ್ತಾಗಿ ಕಾಮಗಾರಿ ಕೈಗೊಂಡು ಅಪಘಾತಗಳನ್ನು ತಡೆಯಬೇಕು ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ. ಚಂದ್ರು, ಚೂಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ, ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ಸಭೆಯಲ್ಲಿ ಉಪಸ್ಥಿತರಿದ್ದರು.

### ಗುಣಮಟ್ಟದ ಕಾಮಗಾರಿ ಆಗಿಲ್ಲ: ಶಾಸಕ

ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ ಬಹುತೇಕವಾಗಿ ಸರ್ವೀಸ್ ರಸ್ತೆಗಳನ್ನು ನಿರ್ಮಾಣ ಮಾಡಲಾಗಿಲ್ಲ. ಗ್ರಾಮಗಳ ವ್ಯಾಪ್ತಿಯಲ್ಲಿ ಬರುವ ಹೆದ್ದಾರಿಯಲ್ಲಿ ಬೀದಿ ದೀಪಗಳು ಇಲ್ಲ. ಚರಂಡಿ ವ್ಯವಸ್ಥೆಯನ್ನು ಮಾಡಲಾಗಿಲ್ಲ. ಅಗರ ಮಾಂಬಳ್ಳಿ ಇನ್ನಿತರ ಕಡೆ ಗುಣಮಟ್ಟದ ಕಾಮಗಾರಿ ಆಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕಳೆದ ಎರಡು ಮೂರು ದಿನಗಳಿಂದ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಹಾನಿ ಸಂಬಂಧ ಅಧಿಕಾರಿಗಳಿಂದ ವಿವರ ಪಡೆದ ಸಂಸದ ಸುನೀಲ್ ಬೋಸ್ ಕ್ಷೇತ್ರಗಳಿಗೆ ಭೇಟಿ ನೀಡಿ ಬೆಳೆ ನಷ್ಟ ಸಂಬಂಧ ವರದಿ ನೀಡಬೇಕು. ಅರಣ್ಯ ವಾಸಿಗಳಿಗೆ ಮನೆಗಳನ್ನು ಒದಗಿಸುವ ಪ್ರಕ್ರಿಯೆ ಜರೂರಾಗಿ ನಡೆಯಬೇಕು. ಎಲ್ಲ ವಿಧಾನಸಭಾ ಕ್ಷೇತ್ರಗಳಿಗು ಅಗತ್ಯಕ್ಕನುಗುಣವಾಗಿ ಸಮಾನವಾಗಿ ಮನೆಗಳ ಹಂಚಿಕೆಯಾಗಬೇಕು ಎಂದು ತಿಳಿಸಿದರು. ನಗರ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಇ-ಸ್ವತ್ತು ನೀಡಲು ವಿಳಂಬ ಧೋರಣೆ ಅನುಸರಿಸಲಾಗುತ್ತಿದೆ ಎಂಬ ದೂರುಗಳು ಹೆಚ್ಚಾಗಿ ಕೇಳಿ ಬರುತ್ತಿವೆ. ಅಧಿಕಾರಿಗಳು ನಿಗದಿತ ಅವಧಿಯೊಳಗೆ ಇ-ಸ್ವತ್ತು ನೀಡಬೇಕು. ಜನರನ್ನು ಅಲೆದಾಡಿಸದೇ ಕಾಲಮಿತಿಯಲ್ಲಿ ಸೌಲಭ್ಯಗಳನ್ನು ತಲುಪಿಸಬೇಕು. ಕಸ ವಿಲೇವಾರಿ ಸಮರ್ಪಕವಾಗಿ ಆಗಬೇಕು. ಪ್ರಸ್ತುತ ಬೇಸಿಗೆ ಇರುವುದರಿಂದ ಕುಡಿಯುವ ನೀರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

### ಕಟ್ನವಾಡಿಯಲ್ಲಿ ಗಾಳಿಮಳೆ

## ಮರ, ವಿದ್ಯುತ್ ಕಂಬ ಬಿದ್ದು 2 ಮನೆಗೆ ಹಾನಿ

**ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ, ವೈಯಕ್ತಿಕ ಪರಿಹಾರ ವಿತರಣೆ, ಹೊಸ ಮನೆ ಭರವಸೆ**



ಚಾಮರಾಜನಗರ: ಬುಧವಾರ ಸಂಜೆ ಬಿದ್ದ ಗಾಳಿ ಮಳೆಗೆ ತಾಲೂಕಿನ ಕಟ್ನವಾಡಿ ಗ್ರಾಮದಲ್ಲಿ ಮರ, ವಿದ್ಯುತ್ ಕಂಬ ಬಿದ್ದ 2 ಮನೆಗಳಿಗೆ ಹಾನಿಯಾಗಿದೆ.

ಗ್ರಾಮದ ಚೆಲುವರಾಜು ಮನೆಗೆ ಮರವೊಂದು ಬುಡಸಮೇತ ಬಿದ್ದು ಹಾನಿ ಮಾಡಿದ್ದು. ಪಕ್ಕದಲ್ಲೇ ಅಂಬಿಕಾ ಅವರ ಮಳೆ ಗೆ ವಿದ್ಯುತ್ ಕಂಬ ಮುರಿದು ಬಿದ್ದು ಹಾನಿ ಉಂಟು ಮಾಡಿದೆ ಯಾವುದೇ ತೊಂದರೆ ಯಾಗಿಲ್ಲ.

**ಶಾಸಕ ಭೇಟಿ**

ವಿಷಯ ತಿಳಿದ ಶಾಸಕ ಸಿ.ಪುಟ್ಟರಂಗಶೆಟ್ಟಿ ಗ್ರಾಮಕ್ಕೆ ಭೇಟಿ ಪರಿಶೀಲಿಸಿ, ಮನೆ ಹಾನಿಗೊಳಗಾದ ಚೆಲುವರಾಜು ಅವರಿಗೆ 10 ಸಾವಿರ, ಅಂಬಿಕಾ ಅವರಿಗೆ 5 ಸಾವಿರ ರೂ. ವೈಯುಕ್ತಿಕ ಪರಿಹಾರ ವಿತರಿಸಿದರು. ಅಧಿಕಾರಿಗಳೊಂದಿಗೆ ಮಾತನಾಡಿ, ಸರ್ಕಾರದಿಂದ ಸಿಗುವ ಸವಲತ್ತುಗಳು,ಒಳ್ಳೆಯಮನೆಕೊಡಿಸಿಕೊಡಿಸಿಕೊಡುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಉಡಿಗಾಲ ನಂಜಪ್ಪ, ಗ್ರಾ.ಪಂ.ಮಾಜಿ ಅಧ್ಯಕ್ಷ ಕೆಕೆ ಹುಂಡಿ ಕುಮಾರ್, ಗ್ರಾ.ಪಂ.ಮಾಜಿ ಸದಸ್ಯ ದೊರೆಸ್ವಾಮಿ, ಗುರು ಸ್ವಾಮಿ, ಪ್ರಭುಸ್ವಾಮಿ, ವಿಷ್ಣುಪ್ರಸಾದ್ ಇತರರು ಹಾಜರಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## ನಾಳೆ ನೇಗಿಲಯೋಗಿಯಲ್ಲಿ ಮಹಿಳಾ ದಿನಾಚರಣೆ

ಮೈಸೂರು: ನಗರದ ಮರುಳೇಶ್ವರ ನೇಗಿಲಯೋಗಿ ಭವನದಲ್ಲಿ ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್ ಹಾಗೂ ನೇಗಿಲ ಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದ ನೇತೃತ್ವದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಾ.22ರಂದು ಆಚರಿಸಲಾಗುತ್ತಿದೆ.

ಈ ಕಾರ್ಯಕ್ರಮದ ಅಂಗವಾಗಿ ಮಹಿಳೆಯರ ಪ್ರತಿಭೆಯನ್ನು ಉತ್ತೇಜಿಸುವ ಹಾಗೂ ಅವರಲ್ಲಿ ಆತ್ಮವಿಶ್ವಾಸವನ್ನು ಬೆಳೆಸುವ ಉದ್ದೇಶದಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದವತಿಯಿಂದ ವಿವಿಧ ರೀತಿಯ ಸ್ಪರ್ಧೆಗಳು, ನೃತ್ಯ, ಭಾವಗೀತೆ, ಭರತನಾಟ್ಯ ಮುಂತಾದ ಕಾರ್ಯಕ್ರಮಗಳು ವಿಶೇಷ ಆಕರ್ಷಣೆಯಾಗಿವೆ. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಮಂಡ್ಯ ಜಿಲ್ಲೆಯ ಪೊಲೀಸ್ ಅಧೀಕ್ಷಕಿ ಡಾ.ವಿ.ಜೆ.ಶೋಭಾರಾಣಿ ನೆರವೇರಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ನೇಗಿಲ ಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದ ಅಧ್ಯಕ್ಷ ಶೋಭ ರಮೇಶ್ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಪ್ರಮುಖ ಅತಿಥಿಗಳಾಗಿ ಎಂಎಂಸಿ ಅಸೋಸಿಯೇಟ್ ಪ್ರೊಫೆಸರ್ ಎಂಡಿ ಡಾ.ಶ್ವೇತ ಸದಾನಂದ್ ಹಾಗೂ 3ನೇ ಜೆಎಂಎಫ್ ಸಿ ನ್ಯಾಯಾಲಯದ ಸಹಾಯಕ ಸರ್ಕಾರಿ ಅಭಿಯೋಜಕಿ ಸಂಧ್ಯಾಮಂಜುನಾಥ್ ಸೇರಿ ಇನ್ನಿತರರು ಭಾಗವಹಿಸಲಿದ್ದಾರೆ.

## ಹಿಂದುಳಿದ ವರ್ಗಕ್ಕೆ ಮೀಸಲಾತಿ ಮುಂದುವರಿಕೆಗೆ ಆಗ್ರಹ

ಮೈಸೂರು: ನಾಗರಿಕ ಸೇವಾ ನೇಮಕಾತಿ ವೇಳೆ ಹಿಂದಿನ ಸರ್ಕಾರ ಘೋಷಿಸಿದ್ದಂತೆ ಪರಿಶಿಷ್ಟ ಜಾತಿಗೆ ಒಟ್ಟಾರೆ ಶೇ.17 ಹಾಗೂ ಪರಿಶಿಷ್ಟ ವರ್ಗಗಳಿಗೆ ಶೇ.7 ಮೀಸಲಾತಿ ಮುಂದುವರಿಸಬೇಕೆಂದರು ಬಹುಜನ ವಿದ್ಯಾರ್ಥಿ ಸಂಘದ ಜಿಲ್ಲಾ ಸಂಯೋಜಕ ಸೋಸಲೆ ಸಿದ್ದರಾಜು ಸರ್ಕಾರಕ್ಕೆ ಆಗ್ರಹಿಸಿದರು.



ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಪರಿಶಿಷ್ಟ ಜಾತಿಗೆ ನಿಗದಿಯಾಗಿರುವ ಶೇ.15ಕ್ಕೆ ಬದಲಾಗಿ ಶೇ. 15 ಮೀಸಲಾತಿ ಅಡಿ ನೇಮಕಾತಿ ಮಾಡಿದರೂ ಸಹಾ ಒಳ ಮೀಸಲಾತಿ ಅನ್ವಯ ನೇಮಕ ಮಾಡಿಕೊಳ್ಳಬೇಕು. ಸಿವಿಲ್ ನೇಮಕಾತಿಗೆ ಪ್ರಕಟಿಸಿರುವ ಓಸ್ಟರ್ ಬಿಂದುಗಳನ್ನು ಪರಿಷ್ಕರಿಸಿ ಸಮಾನವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿಯ ಎ, ಬಿ, ಮತ್ತು ಸಿ ಪ್ರವರ್ಗಗಳಿಗೆ ಕ್ರಮವಾಗಿ 1, 2, 3ನೇ ರೋಸ್ಟರ್ ಬಿಂದುಗಳನ್ನು ನಿಗದಿ ಮಾಡಿ ಈ ಕೂಡಲೇ ಆದೇಶಿಸಬೇಕು, ಯಾವುದೇ ಸಮುದಾಯಕ್ಕೂ ಅನ್ಯಾಯವಾಗದಂತೆ ಈ ಗೊಂದಲ ಬಗೆಹರಿಸಬೇಕು, ಅತಿ ಹೆಚ್ಚು ಹಿಂದುಳಿದ ಅಲೆಮಾರಿ ಸಮುದಾಯಗಳನ್ನು ಕಡಿಮೆ ಹಿಂದುಳಿದ ಸಮುದಾಯಗಳೊಂದಿಗೆ ಜೋಡಿಸಿರುವ ಸರ್ಕಾರದ ತಪ್ಪು ನಡೆ ಖಂಡನೀಯ, ಹೀಗಾಗಿ ಅಲೆಮಾರಿ ಸಮುದಾಯಗಳನ್ನು ಈ ಗುಂಪನಿಂದ ಪ್ರತ್ಯೇಕಿಸಿ ಶೇ. 1 ಪ್ರತ್ಯೇಕ ಮೀಸಲಾತಿ ಜಾರಿ ಮಾಡಬೇಕೆಂದು ಒತ್ತಾಯಿಸಿದರು.

ಸರ್ಕಾರ, ನಿಗಮ ಮಂಡಳಿಗಳ ಎಲ್ಲ ನೇಮಕಾತಿಗಳಲ್ಲಿ ಮೊದಲು ಸಆಮಾನ್ಯ ಕೋಟಾದ ಮೆರಿಟ್ ಆಧಾರದಲ್ಲಿ ಭರ್ತಿ ಮಾಡಬೇಕು, ಮೀಸಲಾತಿ ಹೊಂದಿರುವ ಎಲ್ಲ ಸಮುದಾಯದ ಮೆರಿಟ್ ಪಡೆದ ಅಭ್ಯರ್ಥಿಗಳಿಗೂ ಸಹಾ ಸಾಮಾನ್ಯ ಕೋಟಾದ ಹುದ್ದೆಗಳಿಗೆ ಆಯ್ಕೆಯಾಗಲು ಅನುಕೂಲವಾಗುವಂತೆ ತುರ್ತು ಆದೇಶ ಹೊರಡಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಇತೆ ಹಿಂದುಳಿದ ವರ್ಗಗಳಿಗೆ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಜಾರಿಗೊಳಿಸಬೇಕು ಎಂದು ಸಹಾ ಮನವಿ ಮಾಡಿದರು. ಸಾಗರ್ ತಾಯೂರು, ಡಾ.ಸುಬ್ರಹ್ಮಣ್ಯಸ್ವಾಮಿ, ಮಹದೇವ ಕೋಟೆ, ಡಾ.ಶ್ರೀನಿವಾಸ್, ಪ್ರೊ. ಹರಿದಾಸ್ ಹಾಜರಿದ್ದರು.

## ಬಿ.ರಾಚಯ್ಯ ಜೋಡಿರಸ್ತೆ ಅಭಿವೃದ್ಧಿಗೆ ಚಾಲನೆ

ಚಾಮರಾಜನಗರ, ಜಿಲ್ಲಾ ಕೇಂದ್ರದ ಬಿ. ರಾಚಯ್ಯ ಜೋಡಿ ರಸ್ತೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ 3.80 ಕೋಟಿ ರೂ. ವೆಚ್ಚದ ಕಾಮಗಾರಿಗೆ ಎಂ.ಎಸ್.ಐ.ಎಲ್. ಅಧ್ಯಕ್ಷ ಹಾಗೂ ಶಾಸಕ ಸಿ. ಪುಟ್ಟರಂಗಶೆಟ್ಟಿ ಗುದ್ದಲಿ ಪೂಜೆ ನೆರವೇರಿಸಿದರು.




ನಗರದ ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿರುವ ಸರ್ಕಾರಿ ಆಸ್ಪತ್ರೆ ಎದುರಿನ ರಸ್ತೆ ಭಾಗದಲ್ಲಿ ಕಾಮಗಾರಿಗೆ ಶಾಸಕರು ಚಾಲನೆ ನೀಡಿದರು. ಇದೇ ವೇಳೆ ಮಾತನಾಡಿದ ಅವರು ಭುವನೇಶ್ವರಿ (ಪಚ್ಚಪ್ಪ) ವೃತ್ತದಿಂದ ಡಿವೈಎಸ್‌ಪಿ ಕಚೇರಿವರೆಗೆ ಸಮಗ್ರವಾಗಿ ರಸ್ತೆ ಅಭಿವೃದ್ಧಿಯಾಗಲಿದೆ. ಪಾದಚಾರಿ ಮಾರ್ಗ, ವಿದ್ಯುತ್ ದೀಪ, ಇನ್ನಿತರ ವ್ಯವಸ್ಥೆಯು ರಸ್ತೆ ಅಭಿವೃದ್ಧಿಯಲ್ಲಿ ಸೇರಿದೆ ಎಂದರು.

ಭುವನೇಶ್ವರಿ ವೃತ್ತ, ಸರ್ಕಾರಿ ಆಸ್ಪತ್ರೆ ಬಳಿಯ ವೃತ್ತ ಹಾಗೂ ಡಿವೈಎಸ್‌ಪಿ ಕಚೇರಿ ವೃತ್ತಗಳನ್ನು ಅಭಿವೃದ್ಧಿ ಪಡಿಸಲಾಗುತ್ತದೆ. ವಿದ್ಯುತ್ ದೀಪಗಳನ್ನು ಅಳವಡಿಸಲಾಗುತ್ತದೆ. ಒಟ್ಟಾರೆ ರಸ್ತೆಯ ಸಮಗ್ರ ಅಭಿವೃದ್ಧಿ ಕಾರ್ಯಗಳು ನಡೆಯಲಿವೆ. ಕಾಲಮಿತಿಯೊಳಗೆ ಕಾಮಗಾರಿ ಪೂರ್ಣಗೊಳಿಸಲಾಗುತ್ತದೆ ಎಂದು ತಿಳಿಸಿದರು. ನಗರದ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ನೀರು ಪೂರೈಸಲು ಕೊಳವೆಬಾವಿಗಳನ್ನು ಕೊರೆಯಿಸಲಾಗುವುದು. ನಗರಕ್ಕೆ ಅಗತ್ಯ ಪ್ರಮಾಣದಲ್ಲಿ ನೀರು ಸರಬರಾಜು ಮಾಡುವ ಯೋಜನೆ ಹಾಗೂ ಒಳಚರಂಡಿ ಸಂಪರ್ಕ ಸಂಬಂಧ ಯೋಜನೆಗೆ ಈಗಾಗಲೇ ಟೆಂಡರ್ ಆಗಿದ್ದು, ಶೀಘ್ರವೇ ಕಾಮಗಾರಿಗೆ ಚಾಲನೆ ನೀಡಲು ಸಿದ್ದತೆ ಕೈಗೊಳ್ಳಲಾಗುತ್ತದೆ ಎಂದರು. ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ. ಚಂದ್ರು, ಚೂಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ, ನಗರಸಭೆ ಪೌರಾಯುಕ್ತರಾದ ಪರಶುರಾಮ್ ಛಲವಾದಿ, ಇನ್ನಿತರ ಮುಖಂಡರು ಹಾಜರಿದ್ದರು.

### ಜಿಲ್ಲಾಧಿಕಾರಿ ಶ್ರೀರೂಪ ಅವರಿಂದ

## ವಿಶೇಷಚೇತನರಿಗೆ ಸಾಧನ-ಸಲಕರಣೆ ವಿತರಣೆ

ಚಾಮರಾಜನಗರ, ವಿಕಲಚೇತನರಿಗೆ ನೆರವಾಗುವ ಸದುದ್ದೇಶದಿಂದ ಜಿಲ್ಲಾಧಿಕಾರಿ ಶ್ರೀರೂಪ ಅವರು ಜಿಲ್ಲೆಯ ವಿಶೇಷಚೇತನರಿಗೆ ಅವಶ್ಯವಾಗಿರುವ ರೂ. 26 ಲಕ್ಷಕ್ಕೂ ಹೆಚ್ಚಿನ ಮೌಲ್ಯದ ಸಾಧನ-ಸಲಕರಣೆಗಳನ್ನು ನಗರದಲ್ಲಿಂದು ವಿತರಿಸಿದರು.



ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ ಹಾಗೂ ಆರ್ಟಿಫಿಶಿಯಲ್ ಲಿಂಬ್ಸ್ ಮ್ಯಾನುಫ್ಯಾಕ್ಚರಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ (ಅಲಿಂಮ್ಕೋ) ಸಂಸ್ಥೆಗಳ ಸಿ.ಎಸ್.ಆರ್ ನಿಧಿ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಶಿಬಿರದಲ್ಲಿ ಜಿಲ್ಲೆಯ 235 ಫಲಾನುಭವಿಗಳಿಗೆ 420 ವಿವಿಧ ಬಗೆಯ ಸಾಧನ-ಸಲಕರಣೆಗಳನ್ನು ವಿತರಣೆ ಮಾಡಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ವಿಶೇಷಚೇತನರಿಗೆ ಅಗತ್ಯವಾಗಿರುವ ಸಾಧನ-ಸಲಕರಣೆಗಳನ್ನು ವಿತರಿಸುವುದು ಮಾನವೀಯ ಮೌಲ್ಯವುಳ್ಳ ಕೆಲಸವಾಗಿದೆ. ಜಿಲ್ಲೆಯಲ್ಲಿ ವಿಶೇಷಚೇತನರಿಗೆ ಸಾಕಷ್ಟು ಸಮಸ್ಯೆಗಳಿರುವುದು ಕಂಡುಬಂದಿದೆ. ಅವಶ್ಯ ಸೌಲಭ್ಯಗಳನ್ನು ತಲುಪಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ವಿಶೇಷಚೇತನರು ಸಾಧನ ಸಲಕರಣೆಗಳನ್ನು ಪಡೆದು ಸ್ವಾವಲಂಬಿ ಜೀವನ ನಡೆಸಲು ಮುಂದಾಗಬೇಕು ಎಂದರು. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್‌ನ ರಾಜ್ಯ ಕಚೇರಿಯ ಪ್ರಧಾನ ವ್ಯವಸ್ಥಾಪಕರಾದ ಅನೂಪ್ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಆರ್ಟಿಫಿಶಿಯಲ್ ಲಿಂಬ್ಸ್ ಮ್ಯಾನುಫ್ಯಾಕ್ಚರಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ (ಅಲಿಂಮ್ಕೋ) ಸಂಸ್ಥೆಯ ಶಿವಕುಮಾರ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಡಾ. ಮಂಜುನಾಥ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವೇದಿಕೆ ಕಾರ್ಯಕ್ರಮದ ಬಳಿಕ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಎಚ್.ವಿ. ಚಂದ್ರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುನ್ನಾ ಇದ್ದರು.

# ತನು -ಮನ ತಂಪಾಗಿಸೋ ತಂಪು ಬೀಜಗಳು



ಸೌಮ್ಯಸನತ್

ಆಹಾರ ಸೇವನೆಯಲ್ಲಿ ಮತ್ತು ಜೀವನ ಕ್ರಮದಲ್ಲಿ ಉಂಟಾಗುವ ಬದಲಾವಣೆ ಅಶಕ್ತರ ಮೇಲೆ ತೀವ್ರ ಪರಿಣಾಮವನ್ನು ಬೀರುತ್ತದೆ. ಅಂತೆಯೇ ಅವರ ದೈನಂದಿನ ಚಟುವಟಿಕೆಗಳ ಮೇಲೂ ಇದು ಕೆಟ್ಟ ಪರಿಣಾಮವನ್ನು ಬೀರಿ ನಿಸ್ತೇಜಗೊಳಿಸಬಹುದು. ಈ ನಿಶ್ಯಕ್ತಿಯನ್ನು ಪರಿಹರಿಸುವುದಕ್ಕಾಗಿಯೇ ಪ್ರಕೃತಿಯ ವರದಾನವೊಂದು ನೀಡಿದೆ ಅದುವೇ ತಂಪುಬೀಜಗಳು ಇವು ದೇಹವನ್ನು ಚೈತನ್ಯಶೀಲವನ್ನಾಗಿ ಮಾಡಲು ಬಹಳ ಉಪಕಾರಿಯಾಗಿದೆ.

ತುಳಸಿ ಬೀಜಗಳಂತೆ ಕಾಣುವ ಕಾಮ ಕಸ್ತೂರಿಗೆ 'ಸಬ್ಜಾ' ಅಥವಾ 'ತುಕ್?ಮಾರಿಯಾ ಸೀಡ್ಸ್' ಎಂಬ ಹೆಸರೂ ಇದೆ.

ಸಂಸ್ಕೃತದಲ್ಲಿ ಇದಕ್ಕೆ ಕಠಿಂಜರ ಅಥವ ಪರ್ಣಾಸವೆಂದು ಹೆಸರು ಕಠಿನಂ ಜರಯತಿ? ಎಂದರೆ ಎಂತಹ ಕಠಿಣ ಮನಸ್ಕರನ್ನೂ ಬದಲಾಯಿಸುವ ವಿಶಿಷ್ಟ ಸುಗಂಧವುಳ್ಳ ಗಿಡವಿದು.ಈ ಬೀಜ ಬಣ್ಣದಲ್ಲಿ ಕಪ್ಪಾಗಿರುತ್ತದೆ. ಈ ಬೀಜಗಳು ಪೌಷ್ಠಿಕಾಂಶದಿಂದ ಕೂಡಿದ್ದು, ಇದರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರೋಟೀನ್, ಫೈಬರ್ ಮತ್ತು ಕಬ್ಬಿಣದ ಅಂಶವಿದೆ. ಆದ್ದರಿಂದಲೇ ಅನೇಕ ವರ್ಷಗಳಿಂದ ತುಳಸಿ ಬೀಜಗಳನ್ನು ಮನೆಮದ್ದಾಗಿ ಬಳಸಲಾಗುತ್ತಿದೆ. ಈ ಬೀಜಗಳನ್ನು ನೀರಿಗೆ ಹಾಕಿ ಕುಡಿಯುವುದು ಸಾಮಾನ್ಯ. ಇದರಿಂದ ದೇಹಕ್ಕೆ ಉತ್ತಮ ಶಕ್ತಿ, ತಂಪು ನೀಡಲಿದೆ. ಈ ಬೀಜದಲ್ಲಿ ವಿಟಮಿನ್ ಎ, ಬಿ, ಇ ಮತ್ತು ಕೆ, ಕ್ಯಾಲ್ಸಿಯಂ, ರಂಜಕ, ಮೆಗ್ನೀಸಿಯಮ್ ಮತ್ತು ಕಬ್ಬಿಣದಂತಹ ಅಂಶಗಳಿವೆ. ಹೀಗಾಗಿ ರಾತ್ರಿ ನೆನೆಸಿ ಇಟ್ಟು ಬೆಳಗ್ಗೆ ಕುಡಿಯುತ್ತಾರೆ. ಇವುಗಳ ಎಲೆಗಳು ಸುಗಂಧ ದ್ರವ್ಯ ತಯಾರಿಕೆಗೂ ಬಳಕೆಯಾಗುತ್ತದೆ.

ತುಳಸಿ ಬೀಜಗಳಿಂದ ಆರೋಗ್ಯಕ್ಕೆ ಅನೇಕ ಪ್ರಯೋಜನಗಳಿದ್ದು, ಇವುಗಳನ್ನು ಸಾಮಾನ್ಯವಾಗಿ ಸಿಹಿತಿಂಡಿ ಮತ್ತು ಪಾನೀಯಗಳಲ್ಲಿ ಬಳಸಲಾಗುತ್ತದೆ. ಆಯುರ್ವೇದ ಮತ್ತು ಪ್ರಾಚೀನ ಚೀನೀ ಔಷಧದ ಭಾಗವಾಗಿ ಸಹ ಇದನ್ನು ಶಿಫಾರಸು ಮಾಡಲಾಗುತ್ತದೆ. ಸಬ್ಜಾ ಬೀಜಗಳು ಎಂದೂ ಕರೆಯಲ್ಪಡುವ ತುಳಸಿ ಬೀಜಗಳು ಜೀರ್ಣಕ್ರಿಯೆ, ತೂಕ ನಷ್ಟ, ಕೆಮ್ಮು ಮತ್ತು ಶೀತ, ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಮತ್ತು ಇನ್ನೂ ಹೆಚ್ಚಿನ ಆರೋಗ್ಯ ಪ್ರಯೋಜನಗಳನ್ನು ಎತ್ತಿ ತೋರಿಸಿದೆ.

ಅಮೆರಿಕದ ಸಾಂಬಾರ ಪದಾರ್ಥಗಳ ವ್ಯಾಪಾರ ಸಂಘಟನೆ ನೀಡಿರುವ ವರದಿ ಪ್ರಕಾರ ಕಾಮಕಸ್ತೂರಿಯಲ್ಲಿ ಶೇ 6.1ರಷ್ಟು ತೇವಾಂಶ, ಶೇ 11.9ರಷ್ಟು ಪ್ರೋಟಿನ್, ಶೇ 3.6ರಷ್ಟು ಕೊಬ್ಬು, ಶೇ 20.5ರಷ್ಟು ನಾರು, ಶೇ

ಆರೋಗ್ಯ ಭಾಗ್ಯ



41.2ರಷ್ಟು ಕಾರ್ಬೋಹೈಡ್ರೇಟ್, ಶೇ 16.7ರಷ್ಟು ಬೂದಿ ಅಂಶಗಳಿವೆ. ಒಂದುಟೀ ಚಮಚ ಬೀಜಗಳನ್ನು ಒಂದು ಬಟ್ಟಲು ನೀರಿನಲ್ಲಿ ನೆನೆ ಹಾಕುವುದು.ಬೆಳಿಗ್ಗೆ ಈ ಬೀಜಗಳು ಲೋಳಿ ಸರದಂತೆ ಅಂಟು ಅಂಟಾಗಿ ಉಬ್ಬಿರುತ್ತವೆ. ಇದರಲ್ಲಿ ಸ್ವಲ್ಪಕಲ್ಲು ಸಕ್ಕರೆ ಪುಡಿಯನ್ನು ಸೇರಿಸಿ ಸೇವಿಸಿದಾಗ ಶರೀರಕ್ಕೆತಂಪು ನೀಡುವುದು.



- ಈ ಬೀಜಗಳು ದೇಹದಲ್ಲಿ ಕೊಲೆಸ್ಟ್ರಾಲ್ ಮಟ್ಟ ಕಾಪಾಡಿಕೊಳ್ಳಲು ಸಹಾಯ ಮಾಡುತ್ತವೆ. ಆಯುರ್ವೇದದಲ್ಲಿ ಅಧಿಕ ರಕ್ತದೊತ್ತಡಕ್ಕೆ ಪರಿಹಾರವಾಗಿ ತುಳಸಿ ಬೀಜಗಳನ್ನು ಬಳಸಲಾಗುತ್ತದೆ. ಅಧಿಕ ಕೊಲೆಸ್ಟ್ರಾಲ್ ಮತ್ತು ಅಧಿಕ ರಕ್ತದೊತ್ತಡ ಎರಡೂ ಹೃದಯದ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತವೆ. ಆದರೆ ತುಳಸಿ ಬೀಜಗಳು ಹೆಚ್ಚಿನ ಲಿಪಿಡ್ ಮಟ್ಟವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತವೆ. ಒಟ್ಟಿನಲ್ಲಿ ಹೃದಯದ ಆರೋಗ್ಯ ಕಾಪಾಡುವಲ್ಲಿ ತುಳಸಿ ಬೀಜಗಳು ಪ್ರಮುಖ ಪಾತ್ರವಹಿಸುತ್ತವೆ.
- ಈ ಬೀಜಗಳು ದೇಹದಲ್ಲಿ ಇನ್ಸುಲಿನ್ ಪ್ರಮಾಣ ಅಭಿವೃದ್ಧಿಪಡಿಸಲು ಹಾಗೂ ಮಧುಮೇಹ ಸಮಸ್ಯೆಯನ್ನು ನಿಯಂತ್ರಿಸಲು ಸಹಕಾರಿಯಾಗಿವೆ. ಅತಿಯಾದ ಗ್ಯಾಸ್ಟ್ರಿಕ್ ಸಮಸ್ಯೆ ಇರುವವರು ಕಾಮಕಸ್ತೂರಿ ಬೀಜಗಳನ್ನು ನಿಯಮಿತವಾಗಿ ಸೇವಿಸಬೇಕು. ಇದು ಎದೆಯುರಿ ಮತ್ತು ವಾಕರಿಕೆ ಸಮಸ್ಯೆಯಿಂದ ಮುಕ್ತಿ ನೀಡುತ್ತದೆ.
- ದೇಹದ ತೂಕ ಕಳೆದುಕೊಳ್ಳಲು ನಿಯಮಿತವಾಗಿ ಸಬ್ಜಾ ಬೀಜಗಳನ್ನು ಸೇವಿಸಬೇಕು ಅಥವಾ ನೀರಿನಲ್ಲಿ ಬೆರೆಸಿ ಕುಡಿಯಬೇಕು. ನಿಮ್ಮ ದೇಹದ ತೂಕ ಹಲವಾರು ರೀತಿಯ ಆರೋಗ್ಯ ಸಮಸ್ಯೆಗಳಿಗೆ ದಾರಿಮಾಡಿ ಕೊಡುತ್ತದೆ. ಹೀಗಾಗಿ ನೀವು ನಾರಿನಾಂಶ ಹೆಚ್ಚಾಗಿರುವ ಕಾಮಕಸ್ತೂರಿ ಬೀಜಗಳನ್ನು ಸೇವಿಸಿದರೆ ಪರಿಹಾರ ದೊರೆಯುತ್ತದೆ.
- ಈ ಬೀಜಗಳು ಮೂಳೆಗಳ ಮತ್ತು ಮಾಂಸಖಂಡಗಳ ಆರೋಗ್ಯಕ್ಕೆ ಬಹಳ ಪ್ರಯೋಜನಕಾರಿ. ಈ ಬೀಜಗಳು ದೇಹದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವುದರ ಜೊತೆಗೆ ಆರೋಗ್ಯಕರ ದೇಹ ನಮ್ಮದಾಗುವ ಹಾಗೆ ಮಾಡುತ್ತದೆ.
- ಆಂಟಿ-ಆಕ್ಸಿಡೆಂಟ್ ಅಂಶ ಹೆಚ್ಚಾಗಿರುವ ಕಾಮಕಸ್ತೂರಿ ಬೀಜಗಳನ್ನು ಸೇವಿಸುವುದರಿಂದ ಚರ್ಮದ ಆರೋಗ್ಯ ಹೆಚ್ಚುತ್ತದೆ. ಮೊಡವೆಗಳು ಹಾಗೂ ದದ್ದುಗಳು ನಿವಾರಣೆಯಾಗುತ್ತವೆ. ಇದರ ಜೊತೆಗೆ ಚರ್ಮದ ಕಾಂತಿಯು ದುಪ್ಪಟ್ಟಾಗುತ್ತದೆ.
- ಜೀರ್ಣಾಂಗ ವ್ಯವಸ್ಥೆಯ ಅಸಮತೋಲನ ಮತ್ತು ದೇಹದಲ್ಲಿ ಅತಿಯಾದ ಉಷ್ಣಾಂಶ ಕಂಡು ಬಂದಾಗ ಮಲಬದ್ಧತೆ ಸಮಸ್ಯೆ ಉಂಟಾಗುತ್ತದೆ. ಅಂತವರು ಕಾಮಕಸ್ತೂರಿ ಬೀಜಗಳನ್ನು ಸೇವಿಸಬೇಕು. ಇದರಲ್ಲಿ ನಾರಿನಂಶ ಹೆಚ್ಚಾಗಿದ್ದು, ನೈಸರ್ಗಿಕ ರೂಪದಲ್ಲಿ ಕರುಳಿನ ಕಲ್ಮಶಗಳು ಹೊರಗೆ ಬರುತ್ತವೆ.
- ಪ್ರತಿನಿತ್ಯ ಕಾಮಕಸ್ತೂರಿ ಎಲೆಗಳ ರಸವನ್ನು ದೇಹಕ್ಕೆ ಹಚ್ಚಿಕೊಂಡರೆ ದುರ್ಗಂಧ ನಿವಾರಣೆಯಾಗುತ್ತದೆ. ಗಂಟಲು ಬೇನೆಯಾಗಿದ್ದರೆ ಕಾಮಕಸ್ತೂರಿಯ ಹಸಿ ಎಲೆಗಳ ರಸವನ್ನು ಹಿಂಡಿ ಬಟ್ಟೆಯಲ್ಲಿ ಶೋಧಿಸಿ, ಜೇನುತುಪ್ಪದಲ್ಲಿ ಬೆರೆಸಿ ನೆಕ್ಕುವುದರಿಂದ ಗುಣಕಾಣುತ್ತದೆ. ಮೂಗಿನಿಂದ ನೀರು ಸುರಿಯುವುದು, ಶೀತ ಮತ್ತು ಜ್ವರಕ್ಕೆ ಕಾಮಕಸ್ತೂರಿ ಎಲೆಗಳ ಕಷಾಯ ಮಾಡಿ 1/4 ಒಳಲೆ ಕಷಾಯಕ್ಕೆ ಸ್ವಲ್ಪಜೇನು ಸೇರಿಸಿ ಕುಡಿಸುವುದರಿಂದ ಉಪಶಮನವಾಗುತ್ತದೆ.



## ಕಾಮ ಕಸ್ತೂರಿ ಬೀಜಗಳ ಸೇವನೆ ಹೇಗೆ

ಸಾಮಾನ್ಯವಾಗಿ ಸೂಪರ್? ಫುಡ್ ಎಂದು ಕರೆಯುವ ಈ ಬೇಜಗಳು ಇತ್ತೀಚಿನ ಕೆಲವು ವರ್ಷಗಳಿಂದ ಹೆಚ್ಚಿನ ಜನಪ್ರಿಯತೆ ಪಡೆದಿದ್ದು, ಹಲವರ ಡಯಟ್?ನಲ್ಲಿ ಸೇರಿದೆ.

ಅನೇಕರು ಇದನ್ನು ತಿನ್ನುವ ವಿಧಾನದಲ್ಲಿ ಹಲವು ಪ್ರಯೋಗ ಮಾಡುತ್ತಾರೆ. ಇದರಲ್ಲಿ ಹೆಚ್ಚಿನ ಮಟ್ಟದ ಒಮೆಗಾ-3 ಆಮ್ಲ ಇದ್ದು, ಇದನ್ನು ಹಾಗೇ ಕೂಡ ತಿನ್ನುತ್ತಾರೆ. ಇಲ್ಲ ನೀರು, ಹಣ್ಣಿನ ರಸದೊಂದಿಗೆ ಬೆರಸಿ ತಿನ್ನುತ್ತಾರೆ. ಆದರೆ ಇದೀಗ ವಿಜ್ಞಾನಿಗಳು ಇದನ್ನು ರುಬ್ಬಿ ತಿನ್ನುವುದರಿಂದ ಇದರ ಫೈಬರ್? ಪ್ರಯೋಜನ ಸಿಗುತ್ತದೆ ಎಂದಿದ್ದಾರೆ. ಕಾಮ ಕಸ್ತೂರಿ ಬೀಜಗಳನ್ನು ಪುಡಿ ಮಾಡಿ ತಿಂದಾಗ ಫೈಬರ್ ಪೋಷಕಾಂಶಗಳು ದೇಹ ಸೇರುತ್ತದೆ. ಈ ಬೀಜಗಳು ಮೆಟಾಬಾಲೈಟ್?ಗಳನ್ನು ಉತ್ಪಾದಿಸುತ್ತದೆ. ಇದರಿಂದ ಕರುಳಿನ ಕೋಶಕ್ಕೆ ಅನುಕೂಲವಾಗಲಿದೆ ಎಂದಿದ್ದಾರೆ.

**ಎಷ್ಟು ಸೇವಿಸಬೇಕು**

ಸಾಮಾನ್ಯವಾಗಿ ವಯಸ್ಕರು ದಿನಕ್ಕೆ 1 ರಿಂದ 2 ಟೀ ಚಮಚ (ಸುಮಾರು 10–15 ಗ್ರಾಂ) ಕಾಮಕಸ್ತೂರಿ ಬೀಜಗಳನ್ನು (ಸಬ್ಜಾ ಬೀಜ) ಸೇವಿಸುವುದು ಸುರಕ್ಷಿತ. ನೀವು ಮೊದಲ ಬಾರಿ ಸೇವಿಸುತ್ತಿದ್ದರೆ, ಅಲ್ಪ ಪ್ರಮಾಣದಲ್ಲಿ ಪ್ರಾರಂಭಿಸುವುದು ಉತ್ತಮ. ಬೀಜಗಳನ್ನು ನೇರವಾಗಿ ಸೇವಿಸದೆ, ಯಾವಾಗಲೂ ನೀರಿನಲ್ಲಿ ಅಥವಾ ಇತರ ಪಾನೀಯಗಳಲ್ಲಿ (ಲಿಂಬೆ ಪಾನಕ, ಮೊಸರು, ಜ್ಯೂಸ್) ಕನಿಷ್ಠ 15–30 ನಿಮಿಷ ನೆನೆಸಿಟ್ಟು ಬಳಸುವುದು ಅತ್ಯಗತ್ಯ. ಹೆಚ್ಚು ಫೈಬರ್ ಇರುವುದರಿಂದ, ಇದನ್ನು ಸೇವಿಸುವಾಗ ಸಾಕಷ್ಟು ನೀರು ಕುಡಿಯುವುದು ಮುಖ್ಯ. ಕಿಡ್ನಿ ಸಮಸ್ಯೆ ಅಥವಾ ಅಲರ್ಜಿ ಇದ್ದರೆ ಸೇವನೆಗೆ ಮುನ್ನ ವೈದ್ಯರನ್ನು ಸಂಪರ್ಕಿಸಿ.


**ಸೂಚನೆ :** ಯಾವುದೇ ದೀರ್ಘಕಾಲದ ಆರೋಗ್ಯ ಸಮಸ್ಯೆಗಳಿಗೆ ಮನೆಮದ್ದುಗಳನ್ನು ಮಾತ್ರ ಅವಲಂಬಿಸದೆ, ಅಗತ್ಯವಿದ್ದಲ್ಲಿ ವೈದ್ಯರ ಸಲಹೆಯನ್ನು ಪಡೆಯುವುದು ಒಳ್ಳೆಯದು.

---

## ಪದ ಬಂಧ

ಜ್ಯೋತಿ ರಾಜೇಶ್





### ಎಡದಿಂದ ಬಲಕ್ಕೆ


1. ಅಂತ್ಯವಿಲ್ಲದ್ದು ಅನ್ನುವುದನ್ನು ಹೀಗೆ ಹೇಳಿ.....(3)
4. ಮೂರಕ್ಷರದ ಬಾನು.....(3)
6. 'ಸೋಲಿಸಲಾಗದವ'ನಿಗೆ ಹೀಗೆ ಹೇಳಿ.....(5)
7. ಇದು ಚೆಲ್ಲಾಪಿಲ್ಲಿಯಾದ 'ಭೂಮಿ'.....(3)
9. ಇವ ಹಿಂದುಮುಂದಾಗಿ ನಿಂತ ರಾಕ್ಷಸ.....(3)
11. ನಾಚಿ ಕೆಂಪಾದ ಅಕ್ಕಿಗೆ ಹೀಗೆ ಹೇಳಿ.....(3)
13. ಒಪ್ಪಿಸು.....ಅಥವಾ ಕೊಡು, ಎಂದು ಹೇಳಿದ್ದು ಹಿಂದುಮುಂದಾಗಿದೆ.....(3)
14. ಅಶ್ಲೀಲ ನಡವಳಿಕೆಯ ಸ್ವಭಾವದವನಿವ......(3)
16. ಚೂಪಾದ ಅಂಚನ್ನು ಹೊಂದಿರುವ ಲೋಹದ ಆಯುಧ ಇಲ್ಲಿ ಚೆಲ್ಲಾಪಿಲ್ಲಿಯಾಗಿದೆ......(3)
18. ಸೂಕ್ತವಲ್ಲದ/ಹೊಂದಾಣಿಕೆಯಾಗದ ಪರಿಸ್ಥಿತಿ ಇದು...... ಹಿಂದುಮುಂದಾಗಿದೆ.....(5)
20. ಇದು ಹಿಂದು ಮುಂದಾದ ಮೂರಕ್ಷರದ ತುಟಿ..(3)
21. ಹಿಂದು ಮುಂದಾದ ಈ 'ಭೋಜನ'ವನ್ನು ಹೀಗೆ ಹೇಳಿ......(3)

### ಮೇಲಿನಿಂದ ಕೆಳಕ್ಕೆ.....

1. ಭಾವನಿಗಿರುವ 'ಕೊರತೆ'ಯೇ ಇದು......(3)
2. 'ಅನಿಯಮಿತ'ದಲ್ಲಿ ಅಡಗಿರುವ, ಚೆಲ್ಲಾಪಿಲ್ಲಿಯಾಗಿರುವ, ಸ್ತ್ರೀ ಒಬ್ಬರ ಹೆಸರಿದು....(3)
3. ಲೋಹದ ಮೇಲ್ಮೈಯನ್ನು ಚೂಪುಗೊಳಿಸಲು ಬಳಸುವ ಉಕ್ಕಿನ ಉಪಕರಣ..... ಕೊನೆಯಲ್ಲಿ ದೀರ್ಘವಾಗಿದೆ......(2)
4. ತರತರ ವಸ್ತುಗಳ ನಡುವಿನ 'ವ್ಯತ್ಯಾಸ'.....(3)
5. ಈ ಜೋರಾದ ಆರ್ಭಟ/ಘರ್ಜನೆ..... ಅಡಿಮೇಲಾಗಿದೆ ......(3)
8. 'ಅನುಚಿತವಾದ'....ಅಥವ ಅತಾರ್ಕಿಕವಾದ ಎನ್ನುದನ್ನು ಹೀಗೆ ಹೇಳಿ......... (5)
10. ಇದು ಶೀರ್ಷಾಸನ ಹಾಕಿದ 'ನಯವಾದ ಮಾತುಗಳಿಂದ ಮನವೊಲಿಸುವ ಕ್ರಿಯೆ'.....(5)
11. ಇವ ಮೂರಕ್ಷರದ ರಾಜ.....(3)
12. ಸ್ವಂತಿಕೆ/ತನ್ನತನ ಎಂಬರ್ಥದ ಪದ...ತಲೆ ಕೆಳಗಾಗಿದೆ.....(3)
14. ಕ್ಷರವಿಲ್ಲದ್ದಿದು.....(3)
15. ಕೈಗೆ ಸಿಗದ ಅಥವಾ ದುರ್ಲಭ ಎಂಬರ್ಥದ ಪದ ಶೀರ್ಷಾಸನ ಹಾಕಿದೆ.....(3)
16. ಇದು ಕಲಸುಮೇಲೋಗರವಾದ ಬೆಂಕಿ.....(3)
17. ಆಭರಣ ತಯಾರಿಕೆಯಲ್ಲಿ ಬಳಸುವ ನೈಸರ್ಗಿಕ ಮೇಣದಂತಹ ದ್ರವ್ಯ..... ತಲೆಕೆಳಗಾಗಿದೆ.....(3)
19. ಅನುಪಮಳನ್ನು ಪ್ರೀತಿಯಿಂದ ಎರೆಡಕ್ಷರದಲ್ಲಿ ಹೀಗೆ ಕರೆದರೆ.....ಅಡಿ ಮೇಲಾಗಿದೆ......(2)

---

# ಯುಗಾದಿಯ `ಅಂದರ್ ಬಾಹರ್' ಗತವೈಭವದ ಮೆಲುಕು.!



ಹಿರಿಯೂರು ಪ್ರಕಾಶ್

**ಈಗಷ್ಟೇ ಹಿರಿಯೂರಿನ ಗೆಳೆಯನೊಬ್ಬ ನಮ್ಮೂರಿನ ಅಂದಿನ ಯುಗಾದಿಯ ಅಂದರ್– ಬಾಹರ್ ಆಟದ ಬಗ್ಗೆ ನಾನು ಈ ಹಿಂದೆ ಎಂದೋ ಬರೆದಿದ್ದ ಬರಹವನ್ನು ಪೋಸ್ಟ್ ಮಾಡಲು ಹೇಳಿದ್ದ . ಹಿರಿಯೂರಿನವರಿಗಾಗಿ ಮತ್ತೊಮ್ಮೆ ಯುಗಾದಿಯ ಆ ಗತವೈಭವದ ಮೆಲುಕುಗಳು.!!**

ಸುಮಾರು ಐದು ಶತಮಾನಗಳ ಹಿಂದೆ ನಮ್ಮ ವಿಜಯನಗರ ಸಾಮ್ರಾಜ್ಯ ಯವನರ ದಾಳಿಗೆ ಸಿಕ್ಕು ಸರ್ವನಾಶವಾಗಿ ಇಂದು ಹಾಳು ಹಂಪೆಯಾಗಿ ಅಲ್ಲಿನ ಕಲ್ಲು ಕಲ್ಲುಗಳೂ ಅಂದಿನ ವೈಭವದ ಒಂದೊಂದು ಕಥೆಯನ್ನು ಹೇಳುವಂತಿದ್ದು, ಇಂದಿನ ಹಾಳು ಹಂಪೆಯನ್ನು ನೋಡಿದಾಗ ಗತಕಾಲದ ವೈಭವವನ್ನು ನೆನೆದು ಮನಕಲುಕುತ್ತದೆ, ಕರುಳಲ್ಲಿ ಸಂಕಟವಾಗುತ್ತದೆ ಅಲ್ಲವೇ..! ಹೆಚ್ಚು ಕಡಿಮೆ ಅದೇ ರೀತಿಯಲ್ಲಿಯೇ.....

ಹಿಂದೊಮ್ಮೆ ಇಡೀ ಕರುನಾಡಲ್ಲೇ ಯುಗಾದಿಯ ಮೂರು ದಿನಗಳಂದೂ ಕೋಟೆನಾಡು ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ ಗಲ್ಲಿ ಗಲ್ಲಿ– ಬೀದಿ –ಬೀದಿಗಳಲ್ಲೂ ಸಾರ್ವಜನಿಕವಾಗಿ ವೈಭವದಿಂದ ಜರುಗುತ್ತಿದ್ದ ಇಸ್ಪೀಟ್ ನ ಅಂದರ್– ಬಾಹರ್ ಆಟ ನಮ್ಮ ಹಿರಿಯೂರನ್ನು ರಾಜ್ಯದ ಭೂಪಟದಲ್ಲಿ ಎದ್ದು ಕಾಣುವಂತೆ ಮಾಡಿ, ಇತರೆ ರಾಜ್ಯದವರೂ ಅಂದು ಗೂಗಲ್ ಮ್ಯಾಪ್ ಸಹಾಯವಿಲ್ಲದಿದ್ದರೂ ಕೇವಲ ಅಂದಿನ ಆಟದ ಕಳೆ–ಕಲೆಯಿಂದಾಗಿ ಪ್ರಖ್ಯಾತವಾಗಿದ್ದ ಹಿರಿಯೂರಿಗೆ ಲಗ್ಗೆ ಇಡುತ್ತಿದ್ದ ಸುವರ್ಣ ದಿನಗಳವು. ಆದರೆ ಇಂದು ಆ ವೈಭವಗಳೆಲ್ಲಾ ಕಣ್ಮರೆಯಾಗಿ ನಮ್ಮೂರು ತನ್ನ ಯುಗಾದಿಯ ಗತಕಾಲದ ಖದರ್ ಅನ್ನು ಕಳೆದುಕೊಂಡು ನಿಸ್ತೇಜವಾಗಿ ಮಲಗಿದೆ. ಇಂದಿನ ಯುಗಾದಿಯ ದಿನದಂದು ಆ ವೈಭವದ ದಿನಗಳನ್ನು ನೆನೆದರೆ ಗತ ವೈಭವಗಳು ಕಣ್ಮುಂದೆ ನರ್ತಿಸುತ್ತವೆ.

ನಮ್ಮ ಹಿರಿಯೂರಿನ ನಿಜವಾದ ಉಗಾದಿ ಹಬ್ಬದ ರಂಗೀತರಂಗ ತಾರಕಕ್ಕೇರುತ್ತಿದುದಕ್ಕೆ ಮತ್ತು ಯುಗಾದಿಯು ಭವ್ಯ ಇತಿಹಾಸ ವರ್ಣರಂಜಿತ ಪುಟಗಳಲ್ಲಿ ಸೇರಿರುವುದಕ್ಕೆ ಬಹುಮುಖ್ಯ ಕಾರಣ ...... ಅಂದಿನ ಮಹಾನ್ ಇಸ್ಪೀಟ್ ಕಲಾವಿದರ, ಜೂಜಿನ ದಿಗ್ಗಜರ,ಕಾರ್ಡ್ಸ್ ಕುಶಲಕರ್ಮಿಗಳ ಜನಪ್ರಿಯ " ಅಂದರ್– ಬಾಹರ್ ಎಂಬ ಇಸ್ಪೀಟ್ ಆಟ. !

ಈ ಆಟಕ್ಕಾಗಿ ನಮ್ಮೂರು ಆ ಕಾಲಕ್ಕೆ ಇಡೀ ರಾಜ್ಯದಲ್ಲೇ ಪ್ರಸಿದ್ಧಿಯಾಗಿತ್ತು . ವಿಧಿದ್ವಾರ ಸ್ಥಾಪಿತವಾದ ಸಕಲ ಶಾಸನ ಬದ್ಧವಾದ ರೀತಿಯಲ್ಲಿ, ಅಲಿಖಿತ ಕಾನೂನಿನ ಮಾನ್ಯತೆಯ ವ್ಯಾಪ್ತಿಯಲ್ಲಿ, ಕ್ರಮಬದ್ಧವಾಗಿ , ತರ್ಕಬದ್ಧವಾಗಿ , ರಾಜಾರೋಷವಾಗಿ, ಜಾತ್ಯತೀತವಾಗಿ, ಧರ್ಮಾತೀತವಾಗಿ, ಲಿಂಗಾತೀತವಾಗಿ, ಏರಿಯಾತೀತವಾಗಿ, ವಯೋಮಾನಾತೀತ ವಾಗಿಯೂ..... ಅಲ್ಲದೇ ಊರು– ಕೇರಿ, ಗಡಿ – ನುಡಿ– ಗುಡಿ ಎಂಬ ಬೇಧವಿಲ್ಲದೇ , ಪಕ್ಷಬೇಧವಿಲ್ಲದೇ ಸಾಂಗೋಪಾಂಗವಾಗಿ ಯಾವುದೇ ಎಗ್ಗಿಲ್ಲದೇ ವಿಜೃಂಭಣೆಯಿಂದ ಸತತ ಮೂರು ದಿನಗಳ ಕಾಲ ಜರುಗುತ್ತಿದ್ದ ಅಂದರ್ – ಬಾಹರ್ ಆಟದ ಸೊಗಸನ್ನು ನೋಡೋದೇ ಕಣ್ಣಿಗೆ ಹಬ್ಬ...! ಆ ಆಟದ ರೋಚಕತೆಯನ್ನು ಬಾಲ್ಯದಿಂದಲೂ ಕಂಡು, ಆಡಿ ಬೆಳೆದು ಪುನೀತರಾದ ನಾವೇ ಅದೃಷ್ಟವಂತರು ಕಣ್ರೀ..!

ಬಹುಶಃ ಆ ದಿನಗಳಲ್ಲಿ ಚಿತ್ರದುರ್ಗ ಜಿಲ್ಲೆಯ ಕೆಲವೆಡೆ ಸೇರಿದಂತೆ ನಮ್ಮ ಹಿರಿಯೂರಿನಲ್ಲಿ ಮಾತ್ರವೇ ಯುಗಾದಿಯ ಈ ಕಲರ್ ಫುಲ್ ಆಟದ ದೃಶ್ಯಗಳು ಭರ್ತಿ ಮೂರು ದಿನಗಳ ಕಾಲ ಕಂಡು ಬರುತ್ತಿದ್ದವು. ಆ ಮೂರು ದಿನಗಳಲ್ಲೂ 'ಅಂದರ್– ಬಾಹರ್" ನ ಖದರ್ ಗೆ ಜವಾಬ್ ನಹೀ ಜನಾಬ್.... ! ಹಬ್ಬದ ಮೂರು ದಿನಗಳು ಲಾ ಅಂಡ್ ಆರ್ಡರ್ ಗೆ ಕಿಂಚಿತ್ತೂ ಲೋಪವಾಗದಂತೆ ಮತ್ತು ಇದಕ್ಕೆ ಕಾನೂನಿನ ಸಮ್ಮತಿಯದೆಯೆಂಬ ಉಬ್ಬಿನೊಂದಿಗೆ ಉಗಾದಿಯ ಇಸ್ಪೀಟ್ ಜೂಜು ಮಜವಾಗಿ ಇರುತ್ತಿತ್ತು !

ವಾಸ್ತವ ವರ್ತಮಾನ

ಇದರಲ್ಲಿ ಭಾಗವಹಿಸಿ ಪಾವನರಾಗಿ ಆಗರ್ಭ ಶ್ರೀಮಂತರಾಗಲು, ಸೆಲೆಬ್ರಿಟಿಗಳಾಗಲು ಅಷ್ಟೇಕೆ ಅಂದರ್– ಬಾಹರ್ ಲೋಕದ ವಿಶ್ವವಿಖ್ಯಾತರಾಗಲು ಇಡೀ ರಾಜ್ಯದಲ್ಲಷ್ಟೇ ಅಲ್ಲದೇ, ಅಕ್ಕ ಪಕ್ಕದ ಸೋದರ ಸಂಸ್ಥಾನಗಳಿಂದಲೂ , ಪಾಳೆಯ ಪಟ್ಟುಗಳಿಂದಲೂ ಅಲ್ಲಿನ " ಅಭಿನವ ಕಲಾಕಾರ" ರನ್ನು , ಇಸ್ಪೀಟ್ ಶಾಸ್ತ್ರ ಕೋವಿದರನ್ನೂ, ಜಗದ್ವಿಖ್ಯಾತ 'ಒಳಾಂಗಣ ಕ್ರೀಡಾ ಪಟು" ಗಳನ್ನೂ, ನಮ್ಮೂರು ಯುಗಾದಿಯಂದು ಸೂಜಿಗಲ್ಲಿನಂತೆ ಸೆಳೆಯುತ್ತಿತ್ತು ! ಬೇರೆ ಪ್ರದೇಶಗಳಲ್ಲಿ ತಮ್ಮ ಕಲಾಪ್ರದರ್ಶನಕ್ಕೆ ಕಾನೂನಾತ್ಮಕವಾಗಿ ಮಾನ್ಯತೆಯಿರದೇ ಸೊರಗಿದ್ದ ಪ್ರತಿಭೆಗಳೆಲ್ಲಾ ಯುಗಾದಿಯ ಮುನ್ನಾ ದಿನವೇ ಇಲ್ಲಿಗೆ ತಂಡೋಪತಂಡವಾಗಿ ವಕ್ಕರಿಸಿ ಅದ್ಭುತ ಪ್ರದರ್ಶನ ನೀಡಲಿಕ್ಕಾಗಿ ಸತತ ತಾಲೀಮಿನಲ್ಲಿ ತೊಡಗುತ್ತಿದ್ದರು. ನಾಳೆ ಯುಗಾದಿ ಅಂದರೆ ಇಂದು ಮಧ್ಯರಾತ್ರಿ ಹನ್ನೆರೆಡು ದಾಟಿದ ಕೂಡಲೇ ಇವರಿಗೆಲ್ಲಾ ಅಂದರ್ ಬಾಹರ್ ಆಡಲು ಅನಾಮತ್ತಾಗಿ ಕಾನೂನಾತ್ಮಕ ಮಾನ್ಯತೆ ಪ್ರಾಪ್ತಿಯಾಗುತ್ತಿತ್ತು ಅಥವಾ ತಾವೇ ಸ್ವತಃ ಪ್ರಾಪ್ತಿ ಮಾಡಿಕೊಳ್ಳುತ್ತಿದ್ದರು. ಈ ವಿಚಾರದಲ್ಲಿ ಸಮಯ ಪಾಲನೆಯನ್ನು ಅತ್ಯಂತ ನಿಷ್ಠೆಯಿಂದ ಕಾಯ್ದುಕೊಳ್ಳುತ್ತಿದ್ದ ಶಿಸ್ತುಬದ್ಧ ಜೂಜಿನ ದಿನಗಳವು. !

ಸತತ ಎಪ್ಪತ್ತೆರಡು ಘಂಟೆಗಳ ಕಾಲ ಕಾನೂನು ಬಾಹಿರವಾಗಿರದ ಈ ಆಟವು ಇಸ್ಪೀಟ್ ನ ಸಕಲ ವಿದ್ಯಾಪಾರಂಗತರ ಪಾಲಿಗೆ ಪರಾಕ್ರಮದ ಪರೀಕ್ಷೆ ! ಅಂದರ್ ಬಾಹರ್ ಗಾಗಿ ವರ್ಷವಿಡೀ ಕಾತರಿಸಿ



ಕಾದು ಕುಳಿತಿದ್ದವರ ಕಲಾತ್ಮಕ ಕರಗಳ ಚೆಲ್ಲಾಟಕ್ಕೆ ಸದಾವಕಾಶ,! ಮೂಲೆಯಲ್ಲೆಲ್ಲೋ ಅಡಗಿಸಿಟ್ಟಿದ್ದ ಇಸ್ಪೀಟ್ ಎಲೆಗಳು ಎದುರಾಳಿಯ ದುಡ್ಡನ್ನು ಖಾಲಿ ಮಾಡಲು ತವಕಿಸುವಂತೆ , ಯುದ್ಧಕ್ಕೆ ಆಹ್ವಾನ ಕೊಟ್ಟಂತೆ ಭಾಸವಾಗುತ್ತ ಅಬ್ಬರಿಸುತ್ತಿದ್ದ ಅದ್ವಿತೀಯ ಝೇಂಕಾರ ! ಈ ಮೂರು ದಿನಗಳಲ್ಲಿ ಆಡುವವನ ಅದೃಷ್ಟ ನೆಟ್ಟಗಿದ್ದರೆ ಅವನಿಗೆ ಕಸ್ತೂರಿನಿವಾಸದ ವೈಭವದ ಮೊದಲರ್ಧ ! ಇಲ್ಲವಾದರೆ... ಓಜಿಣಜಡಿ ಖಟಿಣಜಡಿತಚಿಟ ನ ದಯನೀಯ ಪರಿಸ್ಥಿತಿ ಪ್ರಾಪ್ತಿರಸ್ತು . ! ನಮ್ಮ ಅಂದಿನ ಇಸ್ಪೀಟ್ ಕಲಿಗಳು ಎಂತಹ ಕೆಚ್ಚೆದೆಯುಳ್ಳವರೆಂದರೆ ಈ ತರಹದ ಯಾವುದೇ ಪರಿಸ್ಥಿತಿಗೂ ರೆಡಿಯಾಗಿರುತ್ತಿದ್ದರು. ಅಂದರೆ, ಗೆದ್ದರೆ ಸಾಮ್ರಾಜ್ಯ , ಸೋತರೆ ವೀರ ಸ್ವರ್ಗ ಎನ್ನುವಂತೆ !!

ಎಡಬಿಡದ ಮೂರು ದಿನಗಳ ಈ ಕಾವ್ಯಮಯ ಆಟದ ಓಘಕ್ಕೆ , ಸುಂದರ ಲೋಕಕ್ಕೆ, ಇಡೀ ಊರಿಗೆ ಊರೇ ಒಂದೂ ಗಲ್ಲಿ ಬಿಡದಂತೆ , ಹೆಮ್ಮೆಯಿಂದ ವರ್ಣರಂಜಿತವಾಗಿ ಶೃಂಗಾರಗೊಂಡಿರುತ್ತಿತ್ತು ! ಹಿಂದೆ ವಿಜಯನಗರ ಅರಸರ ಕಾಲದಲ್ಲಿ ಮುತ್ತು ರತ್ನಗಳನ್ನು ಬೀದಿಯಲ್ಲಿ ಮಾರುತ್ತಿದುದನ್ನು ಕೇಳಿದ್ದೇವೆಯೇ ಹೊರತು ನಾವ್ಯಾರು ನೋಡಿಲ್ಲ ! ಆದರೆ ,ನಾವೆಲ್ಲಾ ಕಣ್ಣಾರೆ ಕಂಡಂತೆ ಆಗ ಉಗಾದಿಯ ಮೂರು ದಿನ ( ನಾಲ್ಕು ರಾತ್ರಿ– ಮೂರು ಹಗಲು !), 72 ಘಂಟೆ, 4320 ನಿಮಿಷ, 259200 ಸೆಕೆಂಡ್ ಗಳಲ್ಲಿ ಒಂದು ಘಳಿಗೆಯೂ ಅನವಶ್ಯಕವಾಗಿ ವ್ಯರ್ಥವಾಗದಂತೆ ಹಿರಿಯೂರಿನ ಬೀದಿ ಬೀದಿಗಳಲ್ಲಿ,, ಗಲ್ಲಿ– ಗಲ್ಲಿಗಳಲ್ಲಿ , ಮುಖ್ಯ ರಸ್ತೆಗಳಲ್ಲಿ ಚಪ್ಪರ– ಶಾಮಿಯಾನಗಳಡಿಯಲ್ಲಿ ರಾಶಿ ರಾಶಿ ನೋಟುಗಳು ಒಳಗೆ– ಹೊರಗೆ ತೇಲಾಡಿ ಹರಿಯುತ್ತಿದವು ! ಪ್ರತೀ ಚಪ್ಪರದ, ಶಾಮಿಯಾನಾದ ಅಡಿಯಲ್ಲೊಬ್ಬ ಕುಬೇರ ಮತ್ತವನ ಪಟಾಲಂ ಗಳು ಅಲ್ಲಿ ಅವತರಿಸಿ ಸೆಲೆಬ್ರಿಟಿಗಳಂತೆ ಧರ್ಮ ದರ್ಶನ ನೀಡುತ್ತಿದ್ದರು !! ನೋಟುಗಳಂತೂ ಖಾಲಿ ಪೇಪರ್ ಗಿಂತಲೂ ಕಡೆಯಾಗಿ ಎಲ್ಲೆಲ್ಲಿಯೂ ಹಾರಾಡುತ್ತಿದ್ದವು.

ಬಹುಶಃ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಬಳಿಯೂ ಅಷ್ಟು ಹಣ ಆ ಕಾಲದಲ್ಲಿತ್ತೋ ಇಲ್ಲವೋ ಗೊತ್ತಿಲ್ಲ. ತೆಕ್ಕೆಗಟ್ಟಲೆ ಹಣದ ರಾಶಿಯಲ್ಲಿ ಹಿರಿಯೂರು ಮುಳುಗೆದ್ದು ಸಂಭ್ರಮಿಸುತ್ತಿದ್ದ ಸುವರ್ಣಯುಗದ ಕಾಲವದು.

ಆ ಐಸಿರಿಯ ದಿನಗಳ ಮೂರೇ ದಿನದಲ್ಲಿ ತಮ್ಮ ಕಲಾ ನೈಪುಣ್ಯತೆ ಹಾಗೂ ಅದೃಷ್ಟದ ಬೆಂಬಲದಿಂದ ಧಿಡೀರ್ ಶ್ರೀಮಂತರಾದವರ ಸಿರಿ ಸಂಭ್ರಮದ ರಂಜನೀಯ ಕತೆ; ಅಷ್ಟೇ ದಿನಗಳಲ್ಲಿ ಇದ್ದ ಬದ್ದ ಹಣವನ್ನೆಲ್ಲಾ ಕಳೆದುಕೊಂಡು ಸೋತು ಸುಣ್ಣವಾಗಿ ಹೈರಾಣಾಗಿ ಬೀದಿಗೆ ಬಿದ್ದವರ ಕರುಣಾಜನಕ ಕಥೆ ; ಗೆಲುವಿನ ಸನಿಹ ಬಂದು ಕೊನೆಗೆ ಸೋಲಲ್ಲಿ ಬಿದ್ದವರ ಆರ್ದ್ರತೆಯ ಅಸಹಾಯಕತೆಯ ವ್ಯಥೆ ; ಮೊದಲೆರಡು ದಿನ ಸೋತು ಸುಣ್ಣವಾಗಿ ಕೊನೇ ದಿನ ಫೀನಿಕ್ಸ್ ನಂತೆ ಎದ್ದು ಬಂದು ಕೊನೇ ಬಾಲ್ ನಲ್ಲಿ ಸಿಕ್ಸರ್ ಎತ್ತಿ ತಂಡ ಗೆಲ್ಲಿಸಿದ ಧೋನಿಯಂತೆ ಗೆಲುವಿನ ನಗೆ ಬೀರಿದ ವೀರಾಧಿವೀರರ ರೋಚಕ ಕಥೆ.... ಇವೆಲ್ಲವನ್ನೂ ಕಣ್ಣಾರೆ ಕಂಡ ನಮ್ಮ ನಯನಗಳೇ ಧನ್ಯ ! ಈ ವೈಭವದ ದೃಶ್ಯ ಕಾವ್ಯಗಳಿಗೆಲ್ಲಾ ನಾನು ಸಹಾ ಅಂದು ಮೂಕ ಸಾಕ್ಷಿಯಾಗಿದ್ದೆ. ಗೆದ್ದ ಯಾವ ಹಣಕ್ಕೂ ಎಲ್ಲಿಯೂ ಲೆಕ್ಕ ಪತ್ರ , ಬ್ಯಾಲೆನ್ಸ್ ಶೀಟ್ , ಆಡಿಟ್, ಆದಾಯ ತೆರಿಗೆ ಅಂತ ಕಿರಿಕ್ ಇರಲಿಲ್ಲ. ಹೀಗಾಗಿ ನಿಜಾರ್ಥದಲ್ಲಿ ಮುಕ್ತ ಮಾರುಕಟ್ಟೆಯ ಸ್ವಾತಂತ್ರ್ಯವಿದ್ದ ಸ್ವಚ್ಛಂದ ಅವಧಿ ಅದು. ಕಾಲ ಸಾಗಿದಂತೆ ಯುಗಾದಿ ದಿನದಂದು " ಒಳಗೆ – ಹೊರಗೆ " ಆಡುವವರನ್ನು ಕಂಬಿ ಒಳಗೆ ಹಾಕುತ್ತೇವೆಂದು ಅಬ್ಬರಿಸಿದ ಪೊಲೀಸ್ ವ್ಯವಸ್ಥೆಯ ವಿರುದ್ಧವೇ ತೊಡೆ ತಟ್ಟಿ ನಿಂತು , ಇಡೀ ಹಿರಿಯೂರಿಗೆ ಊರೇ ಒಗ್ಗಟ್ಟಾಗಿ ಆಟ ನಿಷೇಧದ ವಿರುದ್ಧ ಸತತವಾಗಿ ಹೋರಾಡಿ ಸ್ವಲ್ಪ ಕಾಲ ಮಾವನ ಮನೆಯಲ್ಲಿ " ಅಂದರ್" ಆದರೂ ನಂತರ ಒಬ್ಬಟ್ಟಿನ ಹಬ್ಬದ ಗುಣದಿಂದಾಗಿ , ಪಕ್ಷಭೇಧ ಮರೆತು ಮಾಡಿದ ಒಗ್ಗಟ್ಟಿನ ಹೋರಾಟದ ಫಲವಾಗಿ ಬೇಗ ಬೇಗನೆ " ಬಾಹರ್" ಆಗಿ ಕೊರಳಲ್ಲಿ ವಿಜಯ ಮಾಲೆ ಧರಿಸಿ , ಕೈಗಳಲ್ಲಿ ದಿಗ್ವಿಜಯದ ಕಂಕಣ ಧರಿಸಿ ಬಂದು ಎಲ್ಲರಿಗೂ "ಜೂಜು ಭಾಗ್ಯ" ಕರುಣಿಸಿದ ಆ ದಿನಗಳ ಲೋಕಲ್ " ಮಹಾನುಭಾವರನ್ನು ನೆನೆದರೇ , ಯಾವ ಬಾಹುಬಲಿ – ಕಟ್ಟಪ್ಪ , ಸಿಂಗಂ , ದಬಾಂಗ್ ಅಥವಾ ವೀರ ಮದಕರಿಗಳೂ ಅವರ ಕೆಚ್ಚೆದೆಗೆ ಸಾಟಿಯಿಲ್ಲ ಬಿಡಿ ! ಅವರೆಲ್ಲರೂ ತಮ್ಮ ಏಕೈಕ ಗುರಿ ಸಾಧನೆಯ ಛಲ ಹೊತ್ತು, ಊರಿನೆಲ್ಲರ ಅಭ್ಯುದಯಕ್ಕಾಗಿ ಮೆರೆದ ಗಂಡುಗಲಿಗಳು. ಇವೆಲ್ಲವನ್ನೊಮ್ಮೆ ನೆನೆದಲ್ಲಿ " ಆರಂಕುಶಮಿಟ್ಟೊಡೆಂ ನೆನೆವುದೆನ್ನ ಮನಂ ಹಿರಿಯೂರು ನಗರಮಂ ಯುಗಾದಿ ಸಮಯತ್ತಿಲ್ " ಎಂದು ಹಾಡುವಂತಹಾ ಅಭಿನವ ಪಂಪನೇ ಆಗಿಬಿಡುತ್ತೇವೆ ಕಣ್ರೀ..!! ಯುಗಾದಿಯ ಆ ಆಟದ ಸಂಭ್ರಮದಲ್ಲಿ "ಸರ್ವಧರ್ಮ ಸಮನ್ವಯತೆ" ಯ ಸಾಕಾರ, ಜಾತ್ಯತೀತತೆಯ ಸೌಹಾರ್ದತೆ, ಬ್ರಾತೃತ್ವದ ಪರಿಕಲ್ಪನೆ, ಈ ಎಲ್ಲವೂ ಅನನ್ಯ, ಅಮೋಘ, ಮತ್ತು ಅನುಕರಣೀಯ ಹಾಗೂ ಅವರ್ಣನೀಯ.......!!

ಕೇವಲ ವ್ಯವಹಾರಿಕವಾಗಿಯಲ್ಲದೇ ಭಾವನಾತ್ಮಕವಾಗಿಯೂ ಕೂಡ ಆ ದಿನಗಳು ಅತಿ ಎತ್ತರದಲ್ಲಿದ್ದ ದಿನಗಳು. ಸೋತವರನ್ನು ಪ್ರಾಮಾಣಿಕವಾಗಿ ಸಂತೈಸಿ ಸಮಾಧಾನಗೊಳಿಸಿ ಅವರ ಕೈಗೆ ಸ್ವಲ್ಪ ಹಣ ಕೊಟ್ಟು ಕಳಿಸುತ್ತಿದ್ದ ಮನ ಕಲುಕುವ ದೃಶ್ಯಗಳು, ಮನೆಯಲ್ಲಿದ್ದ ಬೆಲೆಬಾಳುವ ವಸ್ತುಗಳನ್ನು ಮಾರಿಯಾದರೂ ಚಟಬಿಡದ ಛಲದಿಂದ ಆಟವಾಡಿ ಪುನಃ ಎಲ್ಲವನ್ನೂ ಕಳೆದುಕೊಂಡವರ ಕಥೆಗೆ ಕಣ್ಣೀರಿಟ್ಟು ಅಲ್ಪ ಸ್ವಲ್ಪ ಸಹಾಯ ಮಾಡುವ ಮನಸುಗಳು, ಆಟವಾಡಲು ಕುಳಿತ ಗುಂಪಿಗೆ ಧಾರಾಳವಾಗಿ ಪಾನೀಯ, ತಿಂಡಿ ಪೂರೈಸುತ್ತಿದ್ದ ಮಾತೃ ಹೃದಯದ ಮಾಲೀಕರು, ಗೆಲ್ಲುವ ಭರವಸೆಯ ಮಾತುಗಳಿಂದ ಹುರಿದುಂಬಿಸುತ್ತಿದ್ದ ಆ ಪರಿ...ಒಂದೇ ಎರಡೇ..... ಅದು ಅವರ್ಣನೀಯ !

ಇವನ್ನೆಲ್ಲಾ ಹತ್ತಿರದಿಂದ ನೋಡಿ ಪುಳಕಿತರಾಗಿದ್ದು ನಮ್ಮ ಸುಕೃತ ..!! ಆದರೆ ಪ್ರಕೃತಿಯ ನಿಯಮದಂತೆ ಎಲ್ಲಾ ವೈಭವಗಳೂ ಒಂದು ದಿನ ಮರೆಯಾಗಲೇ ಬೇಕಲ್ಲವೇ! ಕಾಲಾನಂತರ ಈ 'ಅಂದರ್ ಬಾಹರ್ ' ಬಹದ್ದೂರ್ " ಗಳನ್ನು ಹಂತಹಂತವಾಗಿ 'ಅಂದರ್' ಮಾಡಿ ಅವರನ್ನೂ ಮತ್ತವರ ಇತಿಹಾಸವನ್ನೂ ಹಿರಿಯೂರಿನ ವರ್ಣರಂಜಿತ ಪುಟಗಳಲ್ಲಿ ಹೂತು ಹಾಕಲಾಯಿತು !

ಇದು ಅಂದಿನ ಕಥೆ ! ಈಗೀಗ ಅಲ್ಲೊಬ್ಬ ಇಲ್ಲೊಬ್ಬ ಇತಿಹಾಸದ ಪಳೆಯುಳಿಕೆಯ "ಪುರುಷ ಸಿಂಹ" ರು ಅಂದರ್ ಬಾಹರ್ ನ ಇತಿಹಾಸದ ಪುನಃ ರಚನೆಗೆ ರಹಸ್ಯ ಮಾರ್ಗದಲ್ಲಿ ಶ್ರಮಿಸಿದರೂ ಅಂದರ್ ಆಗುವ ಸಕತ್ ಭಯದಿಂದ ಅವರ ಶ್ರಮಕ್ಕೆ ಯಶಸ್ಸು ಸಿಕ್ಕಿಲ್ಲ !! ಹೀಗಾಗಿ ಇದೊಂದು ದುರಂತ ಅಧ್ಯಾಯವಾಗಿ, ಗತಕಾಲದ ಕನವರಿಕೆಯಾಗಿಯೇ ಮುಂದುವರೆಯಲಿದೆ..!

ಇದು ಅಂದಿನ ಅಂದರ್ –ಬಾಹರ್ ಝಲಕ್ !

ಇಂದು..... ಯುಗಾದಿ ಹಬ್ಬವೆಂದರೆ.....

ಕೆಲಸದ ಒತ್ತಡಗಳಲ್ಲಿ , ಟಾರ್ಗೆಟ್ ಗಳ ಅಚೀವ್ ಮೆಂಟ್ ನಲ್ಲಿ , ಬೆಲೆ ಏರಿಕೆಯ ಎಫೆಕ್ಟ್ ನಲ್ಲಿ ದೇಶಗಳ ನಡುವಿನ ಯುದ್ಧಗಳ ಕಾರ್ಮೋಡದಲ್ಲಿ ಹಾಗೂ ಸಂಬಂಧಗಳ ನಡುವಿನ ಬಿರುಕಿನಲ್ಲಿ ಗೊತ್ತೇ ಇರದಂತೆ ಕಳೆದು ಹೋಗಿ ಯುಗಾದಿ ಸಂಭ್ರಮ ಮಂಕಾಗಿದೆ. ಹೊಸ ಬಟ್ಟೆ, ಹೊಸ ಉಡುದಾರ, ಹೊಸ ವಾಹನ, ಹೊಸದಾಗಿ ಮತ್ತೊಮ್ಮೆ ಹೇರ್ ಕಟ್, ಮೈ ತುಂಬಾ ಎಣ್ಣೆ, ಹೊಟ್ಟೆ ತುಂಬಾ ಒಬ್ಬಟ್ಟು, ಬಾಯ್ತುಂಬಾ ಸವಿ ಮಾತು, ಕಣ್ತುಂಬಾ ಅಣ್ಣಾವ್ರ ಹಳೇ ಸಿನಿಮಾ, ವರ್ಷವಿಡೀ ಬಾಯಿ ಚಪ್ಪರಿಸಿ ಕಾಯುತ್ತಿದ್ದ " ವರ್ಷ ತೊಡಕು" , ಇಡೀ ಕುಟುಂಬದೊಂದಿಗೆ ಕೂತು ಉಣ್ಣುವ ಸಡಗರ, ನೀರಿನೋಕಳಿ, ಮಾವು– ಬೇವಿಗಾಗಿ ಹೊರಡುತ್ತಿದ್ದ ಚಾರಣ....ಚಪ್ಪರ ಶಾಮಿಯಾನಗಳ ಅಡಿಯಲ್ಲಿ ಧ್ವನಿಸುತ್ತಿದ್ದ ಅಂದರ್ ಬಾಹರ್ ಆಟದ ನೋಟುಗಳ ಸಪ್ಪಳದ ಅನುರಣನ..... ಇದಾವುದೂ ಇಲ್ಲದ ಇಂದಿನ ಯುಗಾದಿ, ಹಿರಿಯೂರಿನ ಅಂದಿನ ರಸಿಕರಿಗೆ ಯುಗಾದಿಯಂತೆ ಅನಿಸಲಿಕ್ಕೆ ಸಾಧ್ಯವೇ ಇಲ್ಲ ಬಿಡಿ !

ಇಂದೇನಿದ್ದರೂ ಕೇವಲ ಸಾಮಾಜಿಕ ಜಾಲತಾಣಗಳಲ್ಲಿ ಎಲ್ಲರಿಗೂ ಮೆಸೇಜ್ ಗಳಲ್ಲೇ ಶುಭಾಶಯ ಹೇಳಿ ಎಂದಿನಂತೆ ನಗರದಲ್ಲಿನ ಕೃತಕ ಹಳ್ಳಿಮನೆಗಳಂತಹ ಹೋಟೆಲ್ ಗೆ ಹೋಗಿ ಸಿಹಿ ಊಟ ಮಾಡಿ, ರೆಡಿ ಮೇಡ್ ಬೇವು ಬೆಲ್ಲ ತಿಂದು ನೆಟ್ಟು, ಮೊಬೈಲ್, ಟೀವಿ ಗಳಲ್ಲಿ ಇಡೀ ದಿನ ಮುಳುಗೆದ್ದರೆ ಅಲ್ಲಿಗೆ ಯುಗಾದಿಯ ಸಂಭ್ರಮ ಅಂತ್ಯವಾಯಿತೆಂದೇ ಅರ್ಥ ! ಹೀಗೂ ಇತ್ತು ಆ ಒಂದು ಕಾಲ....!

**ಮರೆಯುವ ಮುನ್ನ:** ಏನೇ ಕಾಲ ಬದಲಾದರೂ ನಮ್ಮ ಸಂಸ್ಕೃತಿ ಬದಲಾಗಿಲ್ಲ, ಹಳೇ ದಿನಗಳ ಖದರ್ ಬದಲಾಗಿದ್ದರೂ ಇಂದಿನ ಹಬ್ಬದ ನಜ಼ರ್ ಬದಲಾಗಿಲ್ಲ. ಮನುಷ್ಯನ ಜೀವನ ಶೈಲಿ ಬದಲಾಗಿದ್ದರೂ , ಜೀವನ ಚೈತ್ರ ಬದಲಾಗಿಲ್ಲ, ಬದುಕು ಭಾರವಾದರೂ, ಮನಸಿನ ಭಾವನೆಗಳು ಬದಲಾಗಿಲ್ಲ, ನೋವು ಹೆಚ್ಚಾಗಿದ್ದರೂ ಮಾವು– ಬೇವಿನ ನಲಿವು ಹಾಗೆಯೇ ಉಳಿದಿದೆ ! ಸಂಬಂಧಗಳು ಮಾಸಿದರೂ , ಅನುಬಂಧಗಳು ಬೆಸೆದಿವೆ... ಈ ಹಬ್ಬವೇ ಹಾಗೇ ! ಎಲ್ಲ ಹಬ್ಬದಂತಲ್ಲ ಈ ಯುಗಾದಿ.........!!


**ಏಕೆಂದರೆ ಇದು...**

"ಬೇವಿನ ಕಹಿ ಬಾಳಿನಲ್ಲಿ ಹೂವಿನ ನಸುಗಂಪು ಸೂಸಿ ಜೀವ ಕಳೆಯ ತರುತಿದೆ.''..... !

**ಎಲ್ಲರಿಗೂ ಪರಾಭವ ನಾಮ ಸಂವತ್ಸರದ ಯುಗಾದಿಯ ಹಾರ್ದಿಕ ಶುಭಾಶಯಗಳು.!**



ಸಿನಿಮಾ ವರದಿ: ಬಿ.ಜಿ.ರವಿಕುಮಾರ್



# ಎತ್ತಿಗೆ ಜ್ವರ... ಎಮ್ಮೆಗೆ ಬರೆ...



ಸಾಮಾಜಿಕ ಜಾಲತಾಣಗಳು ಬಂದಮೇಲೆ ಎಲ್ಲ ವಿಷಯಗಳು ಎಲ್ಲಾ ಕಡೆಗೂ ಮುಕ್ತ ಚರ್ಚೆ ಆಗಲು ಅನುಕೂಲ ಆಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ.. ಅದೇ ರೀತಿ ಇದರಿಂದ ಅನಾನುಕೂಲವೂ ಅಷ್ಟೇ ಪ್ರಮಾಣದಲ್ಲಿ ಆಗುತ್ತಿದೆ. ಪೂರ್ವಾಪರವನ್ನು ವಿಚಾರಿಸದೆ ತಮಗೆ ತೋಚಿದ ಹೇಳಿಕೆಗಳನ್ನು ಕೊಡಲು ಎಲ್ಲರೂ ಸರ್ವತಂತ್ರ ಸ್ವತಂತ್ರರು.. ಆದರೆ ಇದರಿಂದ ಒಳಏಟು ಅನುಭವಿಸುವವರು ಮಾತ್ರ ಸಂಬಂಧಪಟ್ಟವರು..

ಕೆಡಿ ಚಿತ್ರದ ಅದೆಂತದೋ ಸೆರಗುಸರಿಸುವ ಹಾಡು ಸಾಮಾಜಿಕ ಜಾಲತಾಣದಲ್ಲಿ ಕಾಣಿಸಿಕೊಂಡಿದ್ದೆ ತಡ ಹಲವರು ಸಂಭ್ರಮಿಸಿದರು.. ಕೆಲವರು ನಖ ಶಿಖಂತಾ ಉರಿದು ಬಿದ್ದರು.. ಇಬ್ಬರಿಗೂ ಅವರದೇ ಆದ ಕಾರಣಗಳಿದ್ದವು.. ಸಮರ್ಥನೆಗೆ ಅವಕಾಶಗಳೂ ಇದ್ದವು..

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ .. ಕರ್ನಾಟಕ ಲೇಖಕಿಯರ ಸಂಘ.. ಜನವಾದಿ ಮಹಿಳಾ ಸಂಘಟನೆ ಸೇರಿದಂತೆ ಅನೇಕ ಪತ್ರಕರ್ತೆಯರು ಮಾಜಿ ಸಚಿವೆ,ಲೇಖಕಿಯರು, ನ್ಯಾಯವಾದಿಗಳು ಒಟ್ಟಾರೆ ಸಾಮಾಜಿಕ ಕಳಕಳಿ ಇರುವ ಹಲವರು ಈ ಕುರಿತು ತಮ್ಮ ಪ್ರತಿಭಟನೆಯನ್ನು ದಾಖಲಿಸಿದರು..

ಇದೆಲ್ಲವೂ ವ್ಯಕ್ತಿಗತ ಸ್ವಾತಂತ್ರ.. ಎಲ್ಲರೂ ಅಭಿಪ್ರಾಯ ಹೇಳುವಾಗ ಇವರ ಅಭಿಪ್ರಾಯಕ್ಕೂ ಮಾನ್ಯತೆ ದೊರಕಲೇಬೇಕು.. ಪತ್ರಿಕೆಗಳಲ್ಲಿ ಇವರ ಹೇಳಿಕೆ ಪ್ರಕಟವೂ ಆಯ್ತು.. ಸಹಜವಾಗಿಯೇ ಇವರು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಕರ್ನಾಟಕ ಚಲನಚಿತ್ರ ನಿರ್ಮಾಪಕರ ಸಂಘ, ಕರ್ನಾಟಕ ಮಹಿಳಾ ಆಯೋಗ ಹಾಗೂ ಸೆನ್ಸಾರ್ ಮಂಡಳಿಗೆ ( ಈಗ ಸೆನ್ಸಾರ್ ಮಂಡಳಿ ಅಲ್ಲ.. ವಾಸ್ತವವಾಗಿ ಈಗ ಇರುವುದು ಚಲನಚಿತ್ರಪ್ರಾದೇಶಿಕ ಸಲಹಾ ಮಂಡಳಿ ಅಷ್ಟೇ ) ಪತ್ರ ಬರೆದು ಮಾಧ್ಯಮಗಳಿಗೆ ಬಿಡುಗಡೆ ಮಾಡಲಾಗಿತ್ತು..

ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಅವರು ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ ಅವರಿಗೆ ಪತ್ರ ಬರೆದು ಈ ಬಗ್ಗೆ ಗಮನ ಸೆಳೆದರು..

ಬಹುಶಹ ಮುಂದೆ ಕರ್ನಾಟಕ ಚಲನಚಿತ್ರವಾಣಿಜ್ಯ ಮಂಡಳಿ ಮತ್ತು ಕರ್ನಾಟಕ ಚಲನಚಿತ್ರ ನಿರ್ಮಾಪಕರ ಸಂಘಗಳು ಕೂಡಾ ತಮ್ಮ ವ್ಯಾಪ್ತಿಯೊಳಗೆ ಈ ಬಗ್ಗೆ ಪ್ರತಿಕ್ರಿಯೆ ನೀಡಬಹುದು.. ಸಮಸ್ಯೆ ಸರಿ ಪಡಿಸಲು ಮುಂದಾಗಬಹುದು.

ಆದರೆ ಇಕ್ಕಟ್ಟಿನಲ್ಲಿ ಮತ್ತು ಬಿಕ್ಕಟ್ಟಿನಲ್ಲಿ ಸಿಕ್ಕಿದ್ದು ಮಾತ್ರ ಪ್ರಾದೇಶಿಕ ಚಲನಚಿತ್ರ ಸಲಹಾ ಮಂಡಳಿ. ( ಸಿಬಿಎಫ್‌ಸಿ) ಏಕೆ ಗೊತ್ತೇ.. ವಿವಾದಕ್ಕೆ ಸಿಲುಕಿರುವ ಹಾಡನ್ನಾಗಲಿ ಅಥವಾ ಆ ಚಲನಚಿತ್ರವನ್ನಾಗಲಿ ನಿರ್ಮಾಪಕರು ಪ್ರಮಾಣ ಪತ್ರಕ್ಕಾಗಿ ಇನ್ನೂ ಅಪ್ಲಿಕೇಶನ್ ಸಲ್ಲಿಸಿಯೇ ಇಲ್ಲ.. ಅಂದಮೇಲೆ ಆ ಚಿತ್ರವನ್ನು ಸಮಿತಿ ವೀಕ್ಷಿಸುವುದು ದೂರದ ಮಾತು..

ಯಾವುದೇ ನಿರ್ಮಾಪಕರು ಮಂಡಳಿಗೆ ಆನ್ಲೈನ್ ಮೂಲಕ ಅಪ್ಲಿಕೇಶನ್ ಸಲ್ಲಿಸಿದ ಮೇಲೆ ಜೇಷ್ಠತೆ ಆಧಾರದ ಮೇಲೆ ನಾಲ್ಕು ಮಂದಿ ಸದಸ್ಯರು ಹಾಗೂ ಐಎಎಸ್ ಮಟ್ಟದ ಅಧಿಕಾರಿ ಆ ಚಲನಚಿತ್ರವನ್ನು ವೀಕ್ಷಿಸಿ ಅಮೂಲಾಗ್ರಚರ್ಚೆ ಮಾಡಿ ಚಿತ್ರಕ್ಕೆ ನೀಡುವ ಪ್ರಮಾಣ ಪತ್ರದಲ್ಲಿ ದಾಖಲಿಸುವ ಗುಣಮಟ್ಟದ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾರೆ.


ಮೊದಲ ಹಂತದ ಈ ಚರ್ಚೆ ಬಳಿಕ ಎರಡನೇ ಹಂತದಲ್ಲಿ ಅಲ್ಲಿಯೇ... ಆಗಲೇ... ನಿರ್ಮಾಪಕ ಮತ್ತು ನಿರ್ದೇಶಕರಿಗೆ ಚಿತ್ರದ ಆಕ್ಷೇಪಾರ್ಹ ಅಂಶಗಳನ್ನು ಮನವರಿಕೆ ಮಾಡಿಕೊಡಲಾಗುತ್ತದೆ.. ಅವುಗಳನ್ನು ಸರಿಪಡಿಸಲು ಖುದ್ದು ಅಧಿಕಾರಿಯೇ ಸೂಚನೆ ನೀಡುತ್ತಾರೆ. ಮುಂದೆ ಈ ತಪ್ಪುಗಳನ್ನು ಸರಿಪಡಿಸಿದ ಬಳಿಕ ಅವುಗಳನ್ನು ಪರಿಶೀಲಿಸಿ ನಂತರ ಪ್ರಮಾಣ ಪತ್ರ ನೀಡುವ ಪ್ರಕ್ರಿಯೆ.

ಇಷ್ಟು ಹಂತ ದಾಟಿ ಬರುವ ಹೊತ್ತಿಗೆ ಕೆಲವೊಮ್ಮೆ ಅಧಿಕಾರಿ ಅರೆಜೀವ ಆಗಿಬಿಡುತ್ತಾರೆ.. ಒತ್ತಡ, ವಶೀಲಿ ಬಾಜಿ.. ಎಲ್ಲವೂ ಇರುತ್ತದೆ. ಸಾಮಾನ್ಯವಾಗಿ ಮಂಡಳಿ ಸದಸ್ಯರಿಗೆ ಈ ತಲೆನೋವು ಇರುವುದಿಲ್ಲ. ಯಾವುದೇ ಪೂರ್ವಾಗ್ರಹ ಇಲ್ಲದೆ ಅಭಿಪ್ರಾಯ ದಾಖಲಿಸಿದರೆ ಮುಗಿಯಿತು.

ನಾಲ್ಕು ಮಂದಿ ಇರುವುದರಿಂದ ಯಾರೂ ಕೂಡಾ ಯಾರ ಮೇಲೂ ಯಾವುದೇ ಅಭಿಪ್ರಾಯವನ್ನೂ ಎಂದಿಗೂ ಹೇರಲು ಆಗುವುದಿಲ್ಲ.. ಹಾಗಾಗಿಯೇ ಆ ಪ್ರಾದೇಶಿಕಅಧಿಕಾರಿ ಪೂರ್ಣ ಜವಾಬ್ದಾರರಾಗುತ್ತಾರೆ..

ಪ್ರಾದೇಶಿಕ ಸೆನ್ಸಾರ್ ಮಂಡಳಿಯ ಸದಸ್ಯರಾಗಿ ಇರುವ ಬಹುತೇಕರ ಅಭಿಪ್ರಾಯ ಹಾಗೂ ನಿರ್ಮಾಪಕರ ವಲಯದಲ್ಲಿ ಇಂದಿಗೂ ಉತ್ತಮ ಹೆಸರು ಗಳಿಸಿರುವ ಪ್ರಸ್ತುತಮಂಡಳಿ ಅಧಿಕಾರಿ ಯಶವಂತ ಶಹನಾಯ್ ಅವರು ಇತ್ತ ಸದಸ್ಯರ ಅಭಿಪ್ರಾಯಕ್ಕೆ ಹಾಗೂ ಅತ್ತ ನಿರ್ಮಾಪಕರ ಅಳಲಿಗೆ ದನಿಯಾಗಿ ನ್ಯಾಯ ಸಮ್ಮತ ತೀರ್ಪು ನೀಡುತ್ತಿದ್ದಾರೆ ಎನ್ನುವುದನ್ನು ಚಿತ್ರೋದ್ಯಮ ಒಪ್ಪಿದೆ.

ಇಷ್ಟೆಲ್ಲ ಹಿನ್ನೆಲೆ ಇರುವಾಗ ಇದ್ಯಾವುದೋ ಹಾಡು ಯೂಟ್ಯೂಬ್ ನಲ್ಲಿ ಬಿತ್ತರವಾಗಿ ಬೆತ್ತಲಾದರೆ ಬಟ್ಟೆ ಹಾಕುವ ಕೆಲಸವಂತೂ ಮಂಡಳಿಯದಲ್ಲ.. ಪರೀಕ್ಷೆಗೆ ಹಾಜರಾಗದೇ ಇರುವ ವಿದ್ಯಾರ್ಥಿಯ ಪರವಾಗಿಯೋ ವಿರೋಧವಾಗಿಯೋ ಹತ್ತಾರು ಮಂದಿ ಪರೀಕ್ಷಾ ಮಂಡಳಿಯನ್ನು ದೂರಿದಂತೆಯೇ ಇದೂ ಕೂಡಾ..



# ಬೃಂದಾವನ ವಿಹಾರಿ ಶೀರ್ಷಿಕೆ ಅನಾವರಣ

ಗಣೇಶ್ ಹಾಗೂ ಶ್ರೀನಿವಾಸರಾಜು ಅವರ ಕಾಂಬಿನೇಶನ್ ನಲ್ಲಿ ಹೊಸಚಿತ್ರವೊಂದು ಆರಂಭವಾಗಿತ್ತು.



ವಿರಾಟ್ ಸಾಯಿ ಕ್ರಿಯೇಷನ್ಸ್ ಅರ್ಪಿಸುವ ಈ ಚಿತ್ರವನ್ನು ಸದಭಿರುಚಿ ಚಿತ್ರಗಳ ನಿರ್ಮಾಪಕ ಸಮೃದ್ಧಿ ವಿ ಮಂಜುನಾಥ್ ಅವರು ನಿರ್ಮಾಣ ಮಾಡುತ್ತಿದ್ದಾರೆ. ಪ್ರಸ್ತುತ ಯುಗಾದಿ ಹಬ್ಬದ ದಿನದಂದು ಈ ಚಿತ್ರದ ಶೀರ್ಷಿಕೆ ಅನಾವರಣವಾಗಿದೆ. ರೊಮ್ಯಾಂಟಿಕ್ ಜಾನರ್ ನ ಈ ಚಿತ್ರಕ್ಕೆ "ಬೃಂದಾವಿಹಾರಿ" ಎಂದು ಹೆಸರಿಡಲಾಗಿದೆ.

ಈಗಾಗಲೇ ಚಿತ್ರೀಕರಣ ಮುಗಿಸಿರುವ "ಬೃಂದಾವಿಹಾರಿ" ಚಿತ್ರಕ್ಕೆ ಪೋಸ್ಟ್ ಪ್ರೊಡಕ್ಷನ್ ವರ್ಕ್ ಬಿರುಸಿನಿಂದ ಸಾಗಿದೆ.

ಗಣೇಶ್ ಅವರಿಗೆ ನಾಯಕಿಯರಾಗಿ ದೇವಿಕಾ ಭಟ್ ಹಾಗೂ ಮಾಳವಿಕ ಶರ್ಮ ಅಭಿನಯಿಸಿದ್ದಾರೆ.

ಗಣೇಶ್ ಹಾಗೂ ಶ್ರೀನಿವಾಸರಾಜು ಅವರ ಕಾಂಬಿನೇಶನ್ ಚಿತ್ರ ಎಂದ ಮೇಲೆ ಹಾಡುಗಳ ಬಗ್ಗೆ ಹೆಚ್ಚಿನ ನಿರೀಕ್ಷೆ ಇರುತ್ತದೆ.

ಸಂಗೀತ ನಿರ್ದೇಶಕರು ಸಂಗೀತ ಸಂಯೋಜಿಸಿರುವ ಸುಮಧುರ ಹಾಡುಗಳು ಈ ಚಿತ್ರದಲ್ಲಿದೆ. ಸದ್ಯದಲ್ಲೇ ಚಿತ್ರದ ಹಾಡುಗಳು ಬಿಡುಗಡೆಯಾಗಲಿದೆ. ನಿರ್ದೇಶಕ ಶ್ರೀನಿವಾಸರಾಜು ಕಥೆ, ಚಿತ್ರಕಥೆ ಬರೆದಿರುವ ಈ ಚಿತ್ರಕ್ಕೆ ವೆಂಕಟ್ ಪ್ರಸಾದ್ ಅವರ ಛಾಯಾಗ್ರಹಣವಿದೆ.

# ಟ್ರೇಲರ್ ನಲ್ಲೇ ಗಮನ ಸೆಳೆದ "ಪ್ರೇಮಿ" ಏಪ್ರಿಲ್ ೩ ರಂದು ಚಿತ್ರಮಂದಿರಗಳತ್ತ



ಶ್ರೀ ಗುರು ಕರಿಬಸವೇಶ್ವರ ಪ್ರೊಡಕ್ಷನ್ ಲಾಂಛನದಲ್ಲಿ ಬಿ.ಸಿದ್ದಲಿಂಗಯ್ಯ ಅವರು ನಿರ್ಮಿಸಿರುವ ಹಾಗೂ ಎಸ್ ಪ್ರದೀಪ್ ವರ್ಮ ಅವರು ನಿರ್ದೇಶಿಸಿರುವ ಹಾಗೂ ಅದ್ವಿಕ್ ನಾಯಕನಾಗಿ ನಟಿಸಿರುವ "ಪ್ರೇಮಿ" ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ಅದ್ದೂರಿಯಾಗಿ ನೆರವೇರಿತು. ನಿರ್ಮಾಪಕ ಭಾ.ಮ.ಹರೀಶ್, ನಿರ್ದೇಶಕ ಸತ್ಯ ಹಾಗೂ ಪಿ.ಆರ್.ಓ ಸುಧೀಂದ್ರ ವೆಂಕಟೇಶ್ ಅವರು ಮತ್ತು ನೃತ್ಯ ನಿರ್ದೇಶಕ ಟಗರು ರಾಜು ಮಾಸ್ಟರ್ ಟ್ರೇಲರ್ ಅನಾವರಣ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು. ೦2 ಟಣುಭಿ ಯೂಟ್ಯೂಬ್ ಚಾನಲ್ ನಲ್ಲಿ ಬಿಡುಗಡೆಯಾಗಿರುವ "ಪ್ರೇಮಿ" ಚಿತ್ರದ ಟ್ರೇಲರ್ ಗೆ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಚಿತ್ರ ಏಪ್ರಿಲ್ 3 ರಂದು ಬಿಡುಗಡೆಯಾಗುತ್ತಿದೆ. ಟ್ರೇಲರ್ ಬಿಡುಗಡೆ ನಂತರ ಚಿತ್ರತಂಡದ ಸದಸ್ಯರು ಮಾತನಾಡಿದರು.

ಸಂಗೀತ ನಿರ್ದೇಶಕನಾಗಿ ಈ ಚಿತ್ರಕ್ಕೆ ಬಂದ ನಾನು ನಂತರ ನಿರ್ದೇಶಕನಾದೆ. ನಾಯಕ ಅದ್ವಿಕ್ ಅವರ ತಾಯಿ ಅಕ್ಕಮಹಾದೇವಿ ಅವರು ಕಥೆ ಬರೆದಿದ್ದಾರೆ. ನಾನು ಚಿತ್ರಕಥೆ ಬರೆದಿದ್ದೇನೆ. 90 ರ ದಶಕದ ಪ್ರೇಮಕಥೆ ಇದು. 80 – 90ರ ಪ್ರೀತಿಯೇ ಬೇರೆ. ಈಗಿನ ಪ್ರೀತಿಯೇ ಬೇರೆ. ಇದೇ ಚಿತ್ರದ ಪ್ರಮುಖ ಕಥಾಹಂದರ. ಚಿತ್ರತಂಡದ ಸದಸ್ಯರ ಸಹಕಾರದಿಂದ ಚಿತ್ರ ಚೆನ್ನಾಗಿ ಬಂದಿದೆ. ಏಪ್ರಿಲ್ 3 ರಂದು ಚಿತ್ರ ಬಿಡುಗಡೆಯಾಗುತ್ತಿದೆ. ನಮ್ಮ ಚಿತ್ರಕ್ಕೆ ನಿಮ್ಮೆಲ್ಲರ ಪ್ರೋತ್ಸಾಹವಿರಲಿ ಎಂದರು ಚಿತ್ರದ ಸಂಗೀತ ನಿರ್ದೇಶಕ ಹಾಗೂ ನಿರ್ದೇಶಕ ಪ್ರದೀಪ್ ವರ್ಮ.

ಕಳೆದ ಕೆಲವು ವರ್ಷಗಳಿಂದ ಕೆಲವು ಚಿತ್ರಗಳಲ್ಲಿ ನಟಿಸಿದ್ದೇನೆ. ನಾಯಕನಾಗಿ ಇದು ಮೊದಲ ಚಿತ್ರ. ನಾಯಕನಾಗಲು ಬೇಕಾದ ಎಲ್ಲಾ ತಯಾರಿ ಮಾಡಿಕೊಂಡು ಈ ಚಿತ್ರದಲ್ಲಿ ಅಭಿನಯಿಸಿದ್ದೇನೆ. ನನ್ನ ತಾಯಿ ಈ ಚಿತ್ರಕ್ಕೆ ಕಥೆ ಬರೆದಿದ್ದು, ತಂದೆ ನಿರ್ಮಾಣ ಮಾಡಿದ್ದಾರೆ. ಸುಂದರ ಪ್ರೇಮ ಕಥಾನಕವನ್ನು ಪ್ರದೀಪ್ ವರ್ಮ ಮನ ಮುಟ್ಟುವಂತೆ ನಿರ್ದೇಶನ ಮಾಡಿದ್ದಾರೆ. ಸಾತ್ವಿಕ ಹಾಗೂ ಶೋಭಿತ ನಾಯಕಿಯರಾಗಿ ನಟಿಸಿದ್ದಾರೆ. ಈ ಚಿತಕ್ಕಾಗಿ ಬೆನ್ನೆಲುಬಾಗಿ ನಿಂತಿರುವುದು ಕಾರ್ಯಕಾರಿ ನಿರ್ಮಾಪಕ ವೀರೇಶ್ ಎರೆಕುಪ್ಪಿ ಹಾಗೂ ಲೈನ್ ಪ್ರೊಡ್ಯೂಸರ್ ಹರೀಶ್ ಉಕ್ಕಡಗಾತ್ರಿ. ಏಪ್ರಿಲ್ 3 ರಂದು ದಯವಿಟ್ಟು ಚಿತ್ರಮಂದಿರಗಳಲ್ಲೇ ನಮ್ಮ ಚಿತ್ರ ನೋಡುವ ಮೂಲಕ ನಮಗೆ ಪ್ರೋತ್ಸಾಹ ನೀಡಿ ಎಂದು ನಾಯಕ ಅದ್ವಿಕ್ ಹೇಳಿದರು.

ಸಿನಿಮಾ ರಂಗ ಹೊಸತು. ಮಗನಿಗಾಗಿ ಸಿನಿಮಾ ನಿರ್ಮಾಣ ಮಾಡಿರುವುದಾಗಿ ನಿರ್ಮಾಪಕ ಸಿದ್ದಲಿಂಗಯ್ಯ ಹೇಳಿದರು.

ದ್ವಿತೀಯ ನಾಯಕಿ ಶೋಭಿತ, ಕಲಾವಿದರಾದ, ದ್ವಿತ ಇ ಗೌಡ, ಸಂತೃಪ್ತಿ, ಹರ್ಷಿತಾ, ನೃತ್ಯ ನಿರ್ದೇಶಕ ರಾಜು ಮಾಸ್ಟರ್ ಹಾಗೂ ವಿತರಕ ಬಸಪ್ಪ ಮುಂತಾದವರು "ಪ್ರೇಮಿ" ಚಿತ್ರದ ಬಗ್ಗೆ ಮಾತನಾಡಿದರು.



# ಮಾರ್ಚ್ 27 ಕ್ಕೆ "ಆಯುಧ" ಹಿಡಿದು ಬರಲಿದ್ದಾರೆ ದೇವರಾಜ್ ಕುಮಾರ್

ದೇವರಾಜ್ ಕುಮಾರ್ ನಿರ್ಮಾಣ, ನಿರ್ದೇಶನ ಹಾಗೂ ನಟನೆಯ "ಆಯುಧ " ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ಸಿರಿ ಮ್ಯೂಸಿಕ್ ಚಾನಲ್ ನಲ್ಲಿ ಆಕ್ಷನ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ಎಲ್ಲರ ಗಮನ ಸೆಳೆಯುತ್ತಿದೆ. ಈಗಾಗಲೇ ಟ್ರೇಲರ್, ಟೀಸರ್ ಹಾಗೂ ಹಾಡುಗಳ ಮೂಲಕ ಜನಪ್ರಿಯ ವಾಗಿರುವ ಈ ಚಿತ್ರ ಮಾರ್ಚ್ 27 ರಂದು ಬಿಡುಗಡೆ ಯಾಗ ಲಿದೆ. ಟ್ರೇಲರ್ ಬಿಡುಗಡೆ ನಂತರ ಆಯೋಜಿ ಸಲಾಗಿದ್ದ ಪತ್ರಿಕಾ ಗೋಷ್ಠಿ ಯಲ್ಲಿ ಚಿತ್ರತಂಡದ ಸದಸ್ಯರು ಮಾತನಾಡಿ ದರು.

ಕಳೆದ ಎರಡು ದಶಕಗಳಿಂದ ಮೇಕಪ್ ಕಲಾವಿದನಾಗಿ ಕನ್ನಡ ಚಿತ್ರರಂಗದೊಂದಿಗೆ ನಂಟು ಹೊಂದಿರುವ ನಾನು "ಡೆಂಜರ್ ಜೋನ್" ಚಿತ್ರದ ಮೂಲಕ ನಾಯಕನಾದೆ. ಮೂರುವರ್ಷಗಳ ಹಿಂದೆ "ತಾಜ್ ಮಹಲ್ 2" ಎಂಬ ಚಿತ್ರದಲ್ಲೂ ನಾಯಕನಾಗಿ ನಟಿಸಿದ್ದೆ. ಆದರೆ ಆ ಚಿತ್ರ ನಿರೀಕ್ಷಿಸಿದಷ್ಟು ಯಶಸ್ಸು ತಂದುಕೊಡಲಿಲ್ಲ. ಬಹಳ ನಷ್ಟವಾಯಿತು. ಡಿಪ್ರೆಶನ್ ಗೆ ಹೋದೆ. ಸಿನಿಮಾ ಮಾಡುವುದೇ ಬೇಡ ಅಂದುಕೊಂಡೆ. ಆದರೆ ಈ ನಿರ್ಧಾರ ತುಂಬಾ ದಿನ ಉಳಿಯಲಿಲ್ಲ. ಎರಡು ವರ್ಷಗಳ ಹಿಂದೆ "ಆಯುಧ" ಎಂಬ ಚಿತ್ರದ ನಿರ್ಮಾಣ ಆರಂಭ ಮಾಡಿದೆ. ಮೇಕಪ್ ಮಾಡಿ ಬಂದ ಹಣದಿಂದ ಈ ಚಿತ್ರ ನಿರ್ಮಾಣ ಮಾಡಿದ್ದೇನೆ. ನಾನೇ ನಿರ್ದೇಶನ ಮಾಡುವುದರ ಜೊತೆಗೆ ನಾಯಕನಾಗಿಯೂ ಅಭಿನಯಿಸಿದ್ದೇನೆ.

ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಮನ್ವರ್ಷಿ ನವಲಗುಂದ ಹಾಡುಗಳನ್ನು ಬರೆದಿದ್ದಾರೆ. ಸ್ಟೀವನ್ ಸತೀಶ್, ಮನದೀಪ್ ಹಾಗೂ ಮಂಜು ಮೂವರು ಸಂಗೀತ ಸಂಯೋಜನೆ ಮಾಡಿದ್ದಾರೆ. ವೀನಸ್ ಮೂರ್ತಿ ಈ ಚಿತ್ರದ ಛಾಯಾಗ್ರಾಹಕರು. ಅಮೃತ ಹಾಗೂ ಸಂಹಿತ ವಿನ್ಯ ನಾಯಕಿಯರು. ಚಿತ್ರತಂಡದ ಸಹಕಾರದಿಂದ "ಆಯುಧ" ಚಿತ್ರ ಚೆನ್ನಾಗಿ ಮೂಡಿಬಂದಿದೆ. ಹಾಡುಗಳು, ಟೀಸರ್ ಹಾಗೂ ಟ್ರೇಲರ್ ಸಿರಿ ಮ್ಯೂಸಿಕ್ ನಲ್ಲಿ ನೋಡಲು ಲಭ್ಯವಿದೆ. ಮಾರ್ಚ್ 27 ರಂದು ಚಿತ್ರ ಲಿಖಿತ್ ಫಿಲಂಸ್ ಮೂಲಕ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ನಮ್ಮ ಚಿತ್ರಕ್ಕೆ ನಿಮ್ಮೆಲ್ಲರ ಪ್ರೋತ್ಸಾಹವಿರಲಿ ಎಂದರು ನಾಯಕ, ನಿರ್ಮಾಪಕ ಹಾಗೂ ನಿರ್ದೇಶಕ ದೇವರಾಜ್ ಕುಮಾರ್.ಈ ಚಿತ್ರದಲ್ಲಿ ನನ್ನ ಪಾತ್ರ ಚೆನ್ನಾಗಿದೆ. ಮಾರ್ಚ್ 27 ರಂದು ಚಿತ್ರ ಬಿಡುಗಡೆಯಾಗುತ್ತಿದೆ. ಎಲ್ಲರೂ ನೋಡಿ ಹಾರೈಸಿ ಎಂದರು ನಾಯಕಿ ಸಂಹಿತಾ ವಿನ್ಯ ಚಿತ್ರದಲ್ಲಿ ನಟಿಸಿರುವ ಸೂರ್ಯಪ್ರವೀಣ್, ರಘುರಾಜ್ ಮಲ್ನಾಡ್, ಸುನೀಲ್ ಬೀರೂರು, ನಾರಾಯಣ್, ಸುರೇಂದ್ರ ಕುಮಾರ್ ಮುಂತಾದ ಕಲಾವಿದರು, ವಿತರಕ ರಮೇಶ್ ಬಾಬು ಹಾಗೂ ತಂತ್ರಜ್ಞರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಸರ್ವಾಂತರ್ಯಾಮಿ ಹಾಡು ಬಿಡುಗಡೆ



ರಂಗಭೂಮಿ ಹಿನ್ನೆಲೆ ಇರುವ ರಂಗಸ್ವಾಮಿ ಕಪಿನಿಪಾಳ್ಯ ನಿರ್ದೇಶನದ, ಹಿತ ಆರ್ ಗೌಡ ನಿರ್ಮಾಣದ ?ಸರ್ವಾಂತರ್ಯಾಮಿ? ಚಿತ್ರದ ಮೊದಲ ಹಾಡು ಇತ್ತೀಚೆಗೆ ಬಿಡುಗಡೆಯಾಗಿ ಜನಪ್ರಿಯವಾಗಿದೆ. ಈಗ ಯುಗಾದಿ ಹಬ್ಬದ ಸಂದರ್ಭದಲ್ಲಿ ಚಿತ್ರದ ಮತ್ತೊಂದು ಹಾಡು ಅನಾವರಣವಾಗಿದೆ. ಜೀವನದ ಕಹಿ ಸತ್ಯವನ್ನು ಈ ಹಾಡಿನ ಮೂಲಕ ಹೇಳಲಾಗಿದೆ. ನಿರ್ದೇಶಕ ರಂಗಸ್ವಾಮಿ ಕಪನಿಪಾಳ್ಯ ಅವರೆ ಈ ಹಾಡನ್ನು ಬರೆದಿದ್ದಾರೆ. ರವೀಂದ್ರ ಸೊರಗಾವಿ ಹಾಡಿರುವ, ರಮೇಶ್ ಕೃಷ್ಣ ಸಂಗೀತ ಸಂಯೋಜಿಸಿರುವ ಈ ಹಾಡು ವೇದಸ್ಯ ಮ್ಯೂಸಿಕ್ ಯೂಟ್ಯೂಬ್ ಚಾನಲ್ ನಲ್ಲಿ ಲಭ್ಯವಿದೆ. ಅಭಿನವ ಕೆಂಪೇಗೌಡ ಡಾ॥ಎಚ್ ಎಂ ಕೃಷ್ಣಮೂರ್ತಿ ಈ ಹಾಡಿನಲ್ಲಿ ಅಭಿನಯಿಸಿದ್ದಾರೆ. ಆಟೋ ನಾಗರಾಜ್, ತೇಜಸ್ವಿನಿ, ಮಾಯಾರಾ, ಅಮೂಲ್ಯ, ರಂಗಸ್ವಾಮಿ, ವಿಕ್ಟರಿ ವಾಸು, ಪೃಥ್ವಿ, ರಾಗ ಸುಬ್ರಹ್ಮಣ್ಯ, ನಿಖಿತ ಗೌಡ, ರಘು, ನಂದನ್ ಮುಂತಾದವರ ತಾರಾಬಳಗವಿರುವ ಈ ಚಿತ್ರಕ್ಕೆ ರಾಜು ಹೆಮ್ಮಿಗೆಪುರ ಛಾಯಾಗ್ರಹಣ ಹಾಗೂ ದೀಪು.ಸಿ.ಎಸ್ ಅವರ ಸಂಕಲನವಿದೆ. ಪೃಥ್ವಿರಾಜ್ ಸಂಭಾಷಣೆ ಬರೆದಿದ್ದಾರೆ. ನಿರ್ದೇಶಕ ಹಾಗೂ ಗೀತರಚನೆಕಾರ ರಾಮ್ ನಾರಾಯಣ್ ಸಹಕಾರ ನೀಡುತ್ತಿದ್ದಾರೆ.

# ಟೆರರ್ ಚಿತ್ರದ "ಬೊಂಬೆ ಬೊಂಬೆ" ಹಾಡು ಬಂತು

ಆದಿತ್ಯ ನಾಯಕನಾಗಿ ನಟಿಸಿರುವ, ಸಿಲ್ಕ್ ಮಂಜು, ರವಿ ಹಾಗೂ ಸ್ಮಿತಾ ವಸಿಷ್ಠ ಅವರು ಉಪ್ಪಿ ಎಂಟರ್ ಟ್ರೈನರ್ಸ್ ಲಾಂಛನದಲ್ಲಿ ನಿರ್ಮಿಸಿರುವ ಹಾಗೂ ರಂಜನ್ ಶಿವರಾಮ್ ಗೌಡ ನಿರ್ದೇಶನದ "ಟೆರರ್" ಚಿತ್ರ ಈಗಾಗಲೇ ಬಿಡುಗಡೆಯಾಗಿರುವ ಟೀಸರ್ ಹಾಗೂ ಹಾಡುಗಳ ಮೂಲಕ ಎಲ್ಲರ ಗಮನ ಸೆಳೆದಿದೆ. ಪ್ರಸ್ತುತ ಈ ಚಿತ್ರಕ್ಕಾಗಿ ನಾಗೇಂದ್ರಪ್ರಸಾದ್ ಬರೆದಿರುವ "ಬೊಂಬೆ ಬೊಂಬೆ" ಎಂಬ ಹಾಡು ಎಂ.ಆರ್.ಟಿ ಮ್ಯೂಸಿಕ್ ಯೂಟ್ಯೂಬ್ ಚಾನಲ್ ನಲ್ಲಿ ಬಿಡುಗಡೆಯಾಗಿದೆ. ಹರ್ಷವರ್ಧನ್ ರಾಜ್ ಸಂಗೀತ ಸಂಯೋಜಿಸಿರುವ ಈ ಹಾಡನ್ನು ಖ್ಯಾತ ಗಾಯಕಿ ಮಮತ ಶರ್ಮ ಹಾಡಿದ್ದಾರೆ. ಆದಿತ್ಯ, ಉತ್ತರ ಭಾರತದ ಬೆಡಗಿ ಶಿವಾಂಗಿ ವರ್ಮ, ಶರತ್ ಲೋಹಿತಾಶ್ವ ಮುಂತಾದವರು ಈ ಹಾಡಿಗೆ ಹೆಜ್ಜೆ ಹಾಕಿದ್ದಾರೆ. ಚಿತ್ರ ಏಪ್ರಿಲ್ 10ರಂದು ತೆರೆಗೆ ಬರಲಿದೆ.

ರಂಜನ್ ಶಿವರಾಮ ಗೌಡ ಈ ಚಿತ್ರದ ಮೂಲಕ ನಿರ್ದೇಶಕರಾಗಿದ್ದಾರೆ.

ಕಥೆ, ಚಿತ್ರಕಥೆ ಕೂಡ ಅವರದೆ. ನವೀನ್ ಅಕ್ಷಿ ಛಾಯಾಗ್ರಹಣ ಹಾಗೂ ಶ್ರೀಕಾಂತ್ ಅವರ ಸಂಕಲನವಿರುವ ಚಿತ್ರಕ್ಕೆ ಕನಲ್ ಕಣ್ಣನ್ ಸಾಹಸ ನಿರ್ದೇಶನ ಹಾಗೂ ಭಾನು ಅವರ ನೃತ್ಯ ನಿರ್ದೇಶನವಿದೆ.

ಆದಿತ್ಯ ಅವರು ಈ ಹಿಂದೆ ಅಭಿನಯಿಸಿರುವ ಪಾತ್ರಗಳಿಗಿಂತ ವಿಭಿನ್ನ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಶ್ರೀನಗರ ಕಿಟ್ಟಿ, ದೇವರಾಜ್, ಶಶಿಕುಮಾರ್, ಕುಮಾರ್ ಬಂಗಾರಪ್ಪ, ಶರತ್ ಲೋಹಿತಾಶ್ವ, ಧರ್ಮ, ಕೋಟೆ ಪ್ರಭಾಕರ್, ರವಿ ಭಟ್ ಮುಂತಾದ ತಾರಾಬಳಗ ಚಿತ್ರದಲ್ಲಿದೆ..



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,